
ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

25 ಅಕ್ಟೋಬರ್ 2025 ಶನಿವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 224 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629

23 ವರ್ಷದೊಳಗಿನವರ ವಿಶ್ವ ಚಾಂಪಿಯನ್‌ಷಿಪ್ ಕುಸ್ತಿಯಲ್ಲಿ 76 ಕೆ.ಜಿ.ವಿಭಾಗದಲ್ಲಿ ಪ್ರಿಯಾ ಮಲ್ಲಿಕ್‌ಗೆ ಕಂಚು ಪದಕ ಪಡೆದಿದ್ದಾರೆ. ಇದು ಭಾರತಕ್ಕೆ ದೊರೆತ ಎರಡನೇ ಪದಕವಾಗಿದೆ.




ಮನೆ ಖರೀದಿಸುತ್ತೀರಾ ? ಕೇಂದ್ರವೇ ಕೊಡುತ್ತೆ 1.80 ಲಕ್ಷ ರೂಪಾಯಿ » 2



ಬೇಲೂರಿನಲ್ಲಿ ಬಸ್ ಸಮಸ್ಯೆ : ವಿದ್ಯಾರ್ಥಿಗಳ ಆಕ್ರೋಶ » 3



ಖಾಸಗಿ ಬಸ್‌ಗೆ ಬೆಂಕಿ : 20 ಜನರ ಸಜೀವ ದಹನ » 4


# ದಾಖಲೆ ಬರೆದ ಹಾಸನಾಂಬ ಆದಾಯ : 25.59 ಕೋ.ರೂ. ಸಂಗ್ರಹ


- ಹುಂಡಿಯಲ್ಲೇ 3.68 ಕೋ.ರೂ.
- 75 ಗ್ರಾಂ ಚಿನ್ನ, 1 ಕೆಜಿ 58 ಗ್ರಾಂ ಬೆಳ್ಳಿ ಕಾಣಿಕೆ
- 7,653 ರೂ. ವಿದೇಶಿ ಕರೆನ್ಸಿ : 42,530 ರೂ. ಹಳೆ ನೋಟು
- ಸಿದ್ದೇಶ್ವರಸ್ವಾಮಿ ಹುಂಡಿಯಲ್ಲಿ 15.17 ಲಕ್ಷ ರೂ.

• ಪ್ರಜೋದಯ ವರದಿ

**ಹಾಸನ:** ಹಾಸನಾಂಬ ದರ್ಶನೋತ್ಸವದಲ್ಲಿ ಈ ವರ್ಷ 25.59 ಕೋ.ರೂ. ದಾಖಲೆ ಪ್ರಮಾಣದ ಆದಾಯ ಸಂಗ್ರಹವಾಗಿದೆ. ಹುಂಡಿಯಲ್ಲೇ 3.68 ಕೋ.ರೂ. ದೊರೆತಿದೆ.

ನಗರದ ತೇರಾಪಂಥ್ ಭವನದಲ್ಲಿ ಶುಕ್ರವಾರ ಬೆಳಿಗ್ಗೆಯಿಂದ ಸಂಜೆಯವರೆಗೂ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ದೇವಾಲಯದ ಆಡಳಿತಾಧಿಕಾರಿ ಮಾರುತಿ ಅವರ ನೇರ ಮೇಲ್ವಿಚಾರಣೆಯಲ್ಲಿ ಬಿಗಿ ಭದ್ರತೆಯೊಂದಿಗೆ ಹುಂಡಿ ಹಣ ಎಣಿಕೆ ಕಾರ್ಯ ನಡೆಯಿತು.

ವಿಶೇಷ ದರ್ಶನದ 1 ಸಾವಿರ ರೂ., 300ರೂ. ಟಿಕೆಟ್ ಮತ್ತು ಲಾಡು ಮಾರಾಟದಿಂದ ಒಟ್ಟು 21,91,75,000 ರೂ. ಸಂಗ್ರಹವಾಗಿದೆ. ಹುಂಡಿಯಲ್ಲಿ ಒಟ್ಟು 3,68,12,275 ರೂ. ದೊರೆತಿದೆ. ಹುಂಡಿ ಕಾಣಿಕೆ, ಟಿಕೆಟ್, ಲಾಡು ಮಾರಾಟ ಎಲ್ಲವೂ ಸೇರಿ ಒಟ್ಟು 25,59,87,327 ರೂ. ಆದಾಯ ಬಂದಂತಾಗಿದೆ. ಕಾಣಿಕೆ ರೂಪದಲ್ಲಿ 75 ಗ್ರಾಂ ಚಿನ್ನ, 1 ಕೆಜಿ 58 ಗ್ರಾಂ ಬೆಳ್ಳಿ ವಸ್ತುಗಳನ್ನು ಭಕ್ತರು ಹುಂಡಿಗೆ ಹಾಕಿದ್ದಾರೆ. ಪ್ರತ್ಯೇಕ ಬ್ಯಾಂಕ್ ಖಾತೆ ಹೊಂದಿರುವ ಸಿದ್ದೇಶ್ವರಸ್ವಾಮಿ ದೇವಾಲಯದ ಹುಂಡಿ ಎಣಿಕೆ ಕಾರ್ಯವೂ ಕೂಡ ಇದೇ ವೇಳೆ ನಡೆದಿದ್ದು, ಈ ಬಾರಿ 15,17,785 ರೂ. ಕಾಣಿಕೆ ಬಂದಿದೆ.



**ಆದಾಯದ ವಿವರ**

| | |
|---|---|
| 2013 | 1.21 ಕೋ. ರೂ. |
| 2014 | 1.27 ಕೋ.ರೂ. |
| 2015 | 1.46 ಕೋ. ರೂ. |
| 2016 | 2.67 ಕೋ. ರೂ. |
| 2017 | 4.14 ಕೋ. ರೂ. |
| 2018 | 2.64 ಕೋ. ರೂ. |
| 2019 | 3.06 ಕೋ.ರೂ. |
| 2020 | 22.79 ಲಕ್ಷ ರೂ. |
| 2021 | 1.54 ಕೋ. ರೂ. |
| 2022 | 3.69 ಕೋ. ರೂ. |
| 2023 | 8.72 ಕೋ. ರೂ. |
| 2024 | 12.63 ಕೋ. ರೂ |
| 2025 | 25.59 ಕೋ. ರೂ |

**7 ಸಾವಿರ ವಿದೇಶಿ ಕರೆನ್ಸಿ**

ಹುಂಡಿಯಲ್ಲಿ ವಿದೇಶಿ ಕರೆನ್ಸಿಗಳನ್ನು ಸಹ ಸಿಕ್ಕಿದ್ದು, ಇಂಡೋನೇಷಿಯಾ-263 ರೂ., ನೇಪಾಳ-3.13 ರೂ., ಮಲೇಷಿಯಾ-28.75 ರೂ., ಯುಎಸ್‌ಎ-526 ರೂ., ಮಾಲ್ಡೀವ್ಸ್-57.29 ರೂ., ಕೆನಡಾ-6259 ರೂ., ಕುವೈತ್-286 ರೂ., ಯುಎಇ- 239 ರೂ. ಸೇರಿ ಒಟ್ಟು 7,653 ರೂ. ವಿದೇಶ ಕರೆನ್ಸಿಯ ಮೌಲ್ಯವಾಗಿದೆ. 42,530 ರೂ. ಬೆಲೆಯ ಹಳೆಯ ನೋಟುಗಳನ್ನು ಭಕ್ತರು ಹುಂಡಿಗೆ ಹಾಕಿದ್ದಾರೆ.



**ಎಣಿಕೆಗೆ 300ಕ್ಕೂ ಹೆಚ್ಚು ಮಂದಿ ಭಾಗಿ**

ಜಿಲ್ಲಾಡಳಿತದ ಮಾರ್ಗದರ್ಶನದಲ್ಲಿ ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ, ಬ್ಯಾಂಕ್ ಅಧಿಕಾರಿಗಳು ಮತ್ತು ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ವಿದ್ಯಾರ್ಥಿಗಳು ಹುಂಡಿ ಎಣಿಕೆ ಕಾರ್ಯದಲ್ಲಿ ಪಾಲ್ಗೊಂಡಿದ್ದಾರೆ. 10 ರೂ., 20 ರೂ., 50 ರೂ., 100ರೂ., 500 ರೂ. ಮುಖ ಬೆಲೆಯ ನೋಟುಗಳನ್ನು ಕಂತೆ ಮಾಡಿ ಎಣಿಕೆ ಮಾಡಲಾಯಿತು. ಎಣಿಕೆ ಕಾರ್ಯಕ್ಕೆ ಸುಮಾರು 300ಕ್ಕೂ ಹೆಚ್ಚು ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲಾಗಿತ್ತು. ಮಧ್ಯಾಹ್ನದ ವರೆಗೂ ವಿಂಗಡಣೆ ಮಾಡಿ ಎಣಿಕೆ ಕಾರ್ಯವನ್ನು ಪೂರ್ಣಗೊಳಿಸಲಾಯಿತು. ನಂತರ ನಾಣ್ಯಗಳು ಹಾಗು ನೋಟುಗಳನ್ನು ವಿಂಗಡಿಸಿ ಬ್ಯಾಂಕ್ ಅಧಿಕಾರಿಗಳು ಮತ್ತು ಸಿಬ್ಬಂದಿ ಲೆಕ್ಕ ಲೆಕ್ಕ ಮಾಡಿಕೊಂಡು ದೇವಸ್ಥಾನದ ಖಾತೆಗೆ ಜಮಾ ಮಾಡಿಕೊಂಡರು.

**ರಾಶಿ ಬೇಡಿಕೆ ಪತ್ರಗಳು**

ಹುಂಡಿ ಎಣಿಕೆ ವೇಳೆ ಈ ಬಾರಿ ಭಕ್ತರ ಭಾವನಾತ್ಮಕ ಕೋರಿಕೆ ಪತ್ರಗಳೇ

» ನಾಲ್ಕನೇ ಪುಟದಲ್ಲಿ

## ನ.3 ರಿಂದ 5ರವರೆಗೆ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರ ಜಿಲ್ಲಾ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮೀ ಚೌಧರಿ ಅವರು ನ.03 ರಿಂದ 05 ರವರೆಗೆ ಜಿಲ್ಲಾ ಪ್ರವಾಸ ಮಾಡಲಿದ್ದಾರೆ.

ನ.03 ರಂದು ನಗರಕ್ಕೆ ಆಗಮಿಸಿ, ಮಧ್ಯಾಹ್ನ 12.30 ಕ್ಕೆ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಹಯೋಗದೊಂದಿಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ಆಯೋಜಿಸಿರುವ ಪಿಯು ಹಾಗೂ ಪದವಿ ವಿದ್ಯಾರ್ಥಿನಿಯರೊಂದಿಗೆ ಸಂವಾದ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಸಂಜೆ 4 ಗಂಟೆಗೆ ಮಹಿಳಾ ಪೊಲೀಸ್ ಠಾಣೆಗೆ ಭೇಟಿ ನೀಡಲಿದ್ದಾರೆ. 5 ಗಂಟೆಗೆ ಮೆಡಿಕಲ್ ಮತ್ತು ಇಂಜಿನೀಯರಿಂಗ್ ಪೋಸ್ಟ್ ಮೆಟ್ರಿಕ್ ಬಾಲಕಿಯರ ವಸತಿ ನಿಲಯಕ್ಕೆ ಭೇಟಿ ನೀಡಲಿದ್ದಾರೆ. ರಾತ್ರಿ ನಗರದಲ್ಲೇ ವಾಸ್ತವ್ಯ ಹೂಡಲಿದ್ದಾರೆ.

ನ.04 ರಂದು ಬೆಳಿಗ್ಗೆ 9 ಗಂಟೆಗೆ ಹಾಸನದ ಜಿಲ್ಲಾಸ್ಪತ್ರೆ ಮತ್ತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಲಿದ್ದಾರೆ. ಬೆ.11 ಗಂಟೆಗೆ ಹಾಸನಾಂಬ ಕಲಾಕ್ಷೇತ್ರ ದಲ್ಲಿ ಆಯೋಜಿಸಿರುವ POSH ಅಧಿನಿಯಮ 2013ರ ತರಬೇತಿ ಹಾಗೂ ಅರಿವು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಅಂದು ಮಧ್ಯಾಹ್ನ 1 ಗಂಟೆಗೆ ಅರಕಲಗೂಡು ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಗೆ ಭೇಟಿ ನೀಡಲಿದ್ದಾರೆ. 3 ಗಂಟೆಗೆ ಅರಕಲಗೂಡು ಪೊಲೀಸ್ ಠಾಣೆಗೆ ಭೇಟಿ ನೀಡಲಿದ್ದಾರೆ. ಸಂಜೆ 5 ಗಂಟೆಗೆ ಸಮಾಜ ಕಲ್ಯಾಣ ಇಲಾಖೆಯ ಪೋಸ್ಟ್ ಮೆಟ್ರಿಕ್, ಉದ್ಯೋಗಾಧಾರಿತ ಭೇಟಿ ನೀಡಲಿದ್ದಾರೆ. ನಂತರ ಹಾಸನಕ್ಕೆ ತೆರಳಿ ವಾಸ್ತವ್ಯ ಹೂಡಲಿದ್ದಾರೆ.

ನ.05 ರಂದು ಬೆಳಿಗ್ಗೆ 11 ಗಂಟೆಗೆ ಮಹಿಳಾ ಸ್ಪಂದನಾ ಕಾರ್ಯಕ್ರಮ ಪರಿಶೀಲನಾ ಸಭೆ ನಡೆಸಲಿದ್ದಾರೆ. ಮಧ್ಯಾಹ್ನ ಗಂಟೆಗೆ ಪತ್ರಿಕಾಗೋಷ್ಠಿ ಮಾಡಲಿದ್ದಾರೆ.

## ಪುರಸಭೆ ಕಚೇರಿ ಕಡತಗಳಿಗೆ ಬೆಂಕಿ ಹಚ್ಚಿದ ದುಷ್ಕರ್ಮಿ

• ಪ್ರಜೋದಯ ವರದಿ

**ಸಕಲೇಶಪುರ:** ಪುರಸಭೆ ಮುಖ್ಯಾಧಿಕಾರಿ ಕಚೇರಿಯ ಕಡತಗಳಿಗೆ ದುಷ್ಕರ್ಮಿಯೊಬ್ಬ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದು, ಪ್ರಮುಖ ದಾಖಲೆಗಳು ಬೆಂಕಿಗಾಹುತಿಯಾಗಿರುವ ಘಟನೆ ಶುಕ್ರವಾರ ನಡೆದಿದೆ.

ವ್ಯಾಪಾರಕ್ಕೆ ಪರವಾನಗಿ ನೀಡದ ಹಿನ್ನಲೆ ದ್ವೇಷದಿಂದ ಕೃತ್ಯ ಎಸಗಿದ್ದಾನೆಂಬ ಶಂಕೆ ವ್ಯಕ್ತವಾಗಿದೆ. ಬಾಟಲಿಯಲ್ಲಿ ಪೆಟ್ರೋಲ್ ತಂದು ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರ ಕೊಠಡಿಗೆ ಸುರಿದು ಬೆಂಕಿ ಹಚ್ಚಲಾಗಿದೆ. ಪರಿಣಾಮ ದಾಖಲೆ ಪತ್ರಗಳು ಸುಟ್ಟು ಕರಕಲಾಗಿವೆ. ಮುಖ್ಯಾಧಿಕಾರಿ ಮಹೇಶ್ವರಪ್ಪ ಅವರು ಪುರಸಭಾ ಸದಸ್ಯರೊಂದಿಗೆ ಗೋವಾ ಪ್ರವಾಸದಲ್ಲಿದ್ದಾರೆ. ಕಚೇರಿಯಲ್ಲಿ ಯಾರೂ ಇಲ್ಲದ ವೇಳೆ ಹಿಂಬದಿಯಿಂದ ನುಗ್ಗಿದ ದುಷ್ಕರ್ಮಿ ಬೆಂಕಿ ಹಚ್ಚಿ ಪರಾರಿಯಾಗಿದ್ದಾನೆಯೆಂದು ಶಂಕಿಸಲಾಗಿದೆ.

ಮುಖ್ಯಾಧಿಕಾರಿ ಕೊಠಡಿಯಲ್ಲಿ ಯಾರೂ ಇರದ ಕಾರಣದಿಂದ ಭಾರೀ ಅನಾಹುತ ತಪ್ಪಿದೆ. ವ್ಯಾಪಾರ ಪರವಾನಗಿ ನೀಡದ ಹಿನ್ನಲೆ ದ್ವೇಷದಿಂದ ಕೃತ್ಯ ಎಸಗಿದ್ದಾನೆಂಬ ಶಂಕೆ ವ್ಯಕ್ತವಾಗಿದೆ. ಪುರಸಭೆ ಕಚೇರಿ ಪೊಲೀಸ್ ಠಾಣೆಯ ಅನತಿ ದೂರದಲ್ಲೇ ಇರುವುದರಿಂದ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ.

ಸ್ಥಳ ಪರಿಶೀಲಿಸಿ ನಂತರ ಮಾತನಾಡಿದ ಶಾಸಕ ಸಿಮೆಂಟ್ ಮಂಜು ಅವರು, ವ್ಯಕ್ತಿಯೊಬ್ಬ ಪುರಸಭೆ ಸಿಬ್ಬಂದಿ ಜೊತೆಗೆ ಅನುಚಿತವಾಗಿ ವರ್ತಿಸಿ, ನಂತರ ಮುಖ್ಯಾಧಿಕಾರಿ ಕಚೇರಿಯೊಳಗೆ ಬೆಂಕಿ ಹಚ್ಚಿದನೆಂದು ತಿಳಿದುಬಂದಿದೆ.

ಸಿಸಿಟಿವಿ ದೃಶ್ಯಗಳಲ್ಲಿ ವ್ಯಕ್ತಿಯೊಬ್ಬ ಬೆಂಕಿ ಹಚ್ಚುತ್ತಿರುವುದು ದಾಖಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ ಲಿಂಗರಾಜು ಎಂಬಾತ ತನ್ನ ಕೆಲಸ ಆಗದ ಹಿನ್ನಲೆಯಲ್ಲಿ ಕೋಪಗೊಂಡು ಈ ಕೃತ್ಯ ಎಸಗಿದ್ದಾನೆಂದು ತಿಳಿದು ಬಂದಿದೆ ಎಂದರು. ಅಧಿಕಾರಿಗಳು ತಕ್ಷಣ ಬೆಂಕಿ ನಂದಿಸಿ ಹೆಚ್ಚಿನ ಹಾನಿ ತಪ್ಪಿಸಿದ್ದಾರೆ. ಅಧಿಕಾರಿಗಳು ಭಯದ ವಾತಾವರಣದಲ್ಲಿ ಕೆಲಸ ಮಾಡಬೇಕಾದ ಸ್ಥಿತಿ ಉಂಟಾಗ ಬಾರದು. ಪೊಲೀಸರು ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿದರು.



## ಪ್ರಪಾತಕ್ಕೆ ಬಿದ್ದ ಕಾರು: ನಾಲ್ವರು ಪಾರು

• ಪ್ರಜೋದಯ ವರದಿ

**ಸಕಲೇಶಪುರ :** ಚಾಲಕನ ನಿಯಂತ್ರಣ ತಪ್ಪಿ ಕಾರು ಪ್ರಪಾತಕ್ಕೆ ಬಿದ್ದಿದ್ದು, ಕಾರಿನಲ್ಲಿದ್ದ ನಾಲ್ವರಿಗೆ ಗಾಯಗಳಾಗಿ ಪ್ರಾಣಾಪಾಯದಿಂದ ಪಾರಾಗಿರುವ ಘಟನೆ ತಾಲ್ಲೂಕಿನ ಮಾರಹಳ್ಳಿ ಗ್ರಾಮದ ಬಳಿ ನಡೆದಿದೆ.

ಶಿವಮೊಗ್ಗಾ ಮೂಲದ ಗೋವಿಂದನಾಯ್ಕ ಅವರು ಕಡಬದಲ್ಲಿ ಶಿಕ್ಷಕರಾಗಿದ್ದು, ಮಗನನ್ನು ಗುರುವಾಹಿನಕೆರೆಯಲ್ಲಿರುವ ನವೋದಯ ಶಾಲೆಗೆ ಬಿಡಲು ಪತ್ನಿ ಹಾಗು ಇಬ್ಬರ ಮಕ್ಕಳ ಜೊತೆ ಸ್ವಿಫ್ಟ್ ಕಾರಿನಲ್ಲಿ ತೆರಳುತ್ತಿದ್ದರು. ಮಾರನಹಳ್ಳಿ ಬಳಿ ಬರುತ್ತಿದ್ದಾಗ ಕಾರು ನಿಯಂತ್ರಣ ತಪ್ಪಿ 80 ಅಡಿ ಆಳದಲ್ಲಿ ಹರಿಯುತ್ತಿರುವ ಕೆಂಪು ಹೊಳೆಗೆ ಬಿದ್ದಿದೆ.



ಕಾರು ಬಿದ್ದಿದ್ದನ್ನು ಕಂಡ ಸ್ಥಳೀಯರು ಹಾಗು ವಾಹನ ಸವಾರರು ತಕ್ಷಣ ಕಾರಿನಿಂದ ನಾಲ್ವರನ್ನು ರಕ್ಷಿಸಿದ್ದಾರೆ. ತಡೆಗೋಡೆ ಇಲ್ಲದಿರುವುದರಿಂದ ಕಾರು ಪ್ರಪಾತಕ್ಕೆ ಬಿದ್ದಿದ್ದು, ಪೊಲೀಸರು ಪರಿಶೀಲನೆ ನಡೆಸಿದರು. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಮೇರಿಕಾ ದಂಪತಿ ಮಡಿಲು ಸೇರಿದ ವಿಶೇಷ ಚೇತನ ಮಗು

• ಪ್ರಜೋದಯ ವರದಿ

**ಹಾಸನ:** ನಗರದ ತವರು ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ಮಾನವೀಯತೆ ಮತ್ತು ಪ್ರೀತಿ ತುಂಬಿದ ಅಪರೂಪದ ಘಟನೆಗೆ ಸಾಕ್ಷಿಯಾಗಿದೆ.

ವಿಶೇಷ ವೈದ್ಯಕೀಯ ಅವಶ್ಯಕತೆ ಹೊಂದಿದ ಎರಡು ವರ್ಷದ ಹೆಣ್ಣು ಮಗು ದೂರದ ಅಮೇರಿಕಾದ ಮಿಸ್ಸೋರಿ ರಾಜ್ಯದ ವಿಲಿಯಮ್ ಮತ್ತು ಆಶ್ಲೀ ದಂಪತಿ ಜೀವನದಲ್ಲಿ ಹೊಸ ಬೆಳಕಾಗಿದ್ದಾಳೆ. ಟ್ರಸ್ಟ್‌ನಲ್ಲಿ ನಡೆದ ಈ ಹೃದಯಸ್ಪರ್ಶಿ ಕಾರ್ಯಕ್ರಮದಲ್ಲಿ ಮಗು ತನ್ನ ಎರಡನೇ ವರ್ಷದ ಹುಟ್ಟುಹಬ್ಬವನ್ನು ಹೊಸ ಪೋಷಕರೊಂದಿಗೆ ಆಚರಿಸಿತು. ನಗು, ಕಣ್ಣೀರು ಮತ್ತು ಸಂತೋಷದ ಮಿಶ್ರಣವಾಗಿದ್ದ ಈ ಕ್ಷಣ ಎಲ್ಲರ ಮನವನ್ನೂ ಸ್ಪರ್ಶಿಸಿತು.

ಕಳೆದ ಎರಡು ವರ್ಷಗಳಿಂದ ಟ್ರಸ್ಟ್‌ನ ಆಶ್ರಯದಲ್ಲಿ ಬೆಳೆದ ಮಗು ಜನ್ಮದಿಂದಲೇ ಕೆಲವು ವೈದ್ಯಕೀಯ ಸವಾಲುಗಳನ್ನು ಎದುರಿಸುತ್ತಿದ್ದಳು. ಆಕೆಯ ಆರೈಕೆ, ಶಿಕ್ಷಣ ಮತ್ತು ವೈದ್ಯಕೀಯ ಚಿಕಿತ್ಸೆಗೆ ತವರು ಸಂಸ್ಥೆಯವರು ಶ್ರಮಿಸಿದ್ದಾರೆ. ಅಮೇರಿಕಾದ ದಂಪತಿಯಾದ ವಿಲಿಯಮ್ ಮತ್ತು ಆಶ್ಲೀ ಅವರು ಆಕೆಯ ಬಗ್ಗೆ ತಿಳಿದುಕೊಂಡ ಬಳಿಕ, ಕಾನೂನಿನ ಪ್ರಕಾರ ಎಲ್ಲಾ ದತ್ತು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಭಾರತದ ಸಂಬಂಧಿತ ಇಲಾಖೆಗಳ ಅನುಮೋದನೆ ಪಡೆದು ಆಕೆಯನ್ನು ತಮ್ಮ ವಶಕ್ಕೆ ಪಡೆದರು. ದತ್ತು ಪ್ರಕ್ರಿಯೆ ಪೂರ್ಣಗೊಂಡ ನಂತರ ಮಗಳ ಹುಟ್ಟುಹಬ್ಬವನ್ನು ತವರು ಪಬ್ಲಿಕ್ ಚಾರಿಟಬಲ್ ಟ್ರಸ್ಟ್‌ನಲ್ಲಿ ಆಚರಿಸಿದರು. ಕೇಕ್ ಕತ್ತರಿಸಿದ ಪುಟ್ಟ ಮಗಳು ನಗುಮೊಗದಿಂದ ಎಲ್ಲರಿಗೂ ಸಂತೋಷ ಹಂಚಿದಳು. ವಿಲಿಯಮ್ ಮತ್ತು ಆಶ್ಲೀ ದಂಪತಿ ಈ ಮಗಳು ನಮ್ಮ ಜೀವನದ ಅತಿ ಅಮೂಲ್ಯ ವರವೆಂದು ಭಾವುಕರಾದರು.

ಸಂಸ್ಥೆಯ ಮುಖ್ಯಸ್ಥ ಡಾ|| ಪಾಲಾಕ್ಷ, ಟ್ರಸ್ಟಿ ಮಧುಪ್ರಿಯ, ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷ ಡಾ|| ಶ್ರೀರಂಗ, ಮಕ್ಕಳ ಕಲ್ಯಾಣ ಸಮಿತಿ ಸದಸ್ಯರಾದ ರವಿ, ರಂಗಸ್ವಾಮಿ ಇತರರಿದ್ದರು.



**ಹಲವು ಆರೋಗ್ಯ ಸಮಸ್ಯೆ**

ಎರಡು ವರ್ಷದ ಮಗು ಹಲವು ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದೆ. ಅವಧಿ ಪೂರ್ವ ಜನಿಸಿದ ಮಗು ಕಡಿಮೆ ತೂಕ ಹೊಂದಿತ್ತು. ಹೃದಯದಲ್ಲಿ ರಂಧ್ರವಿದ್ದ ಕಾರಣ ಜನಿಸಿದಾಗಲೇ ಶಸ್ತ್ರ ಚಿಕಿತ್ಸೆಗೆ ಒಳಗಾಗಬೇಕಾಯಿತು. ಕಣ್ಣಿನ ಶಸ್ತ್ರ ಚಿಕಿತ್ಸೆ ಸಹ ಆಗಿದೆ. ಮಗುವಿನ ಮಾಹಿತಿಯನ್ನು ಕೇಂದ್ರ ಸರ್ಕಾರದ ಕಾರಾ (ಸೆಂಟ್ರಲ್ ಅಡಾಪ್ಷನ್ ರಿಸೋರ್ಸ್ ಅಥಾರಿಟಿ) ವೆಬ್‌ಸೈಟ್‌ನಲ್ಲಿ ದಾಖಲಿಸಲಾಗಿತ್ತು. ಅದನ್ನು ಆಧರಿಸಿ ಅಮೇರಿಕಾದ ದಂಪತಿ ನಮ್ಮನ್ನು ಸಂಪರ್ಕಿಸಿ ಬಾಲ ನ್ಯಾಯ ಕಾಯ್ದೆ ಅನ್ವಯ ಮಗುವನ್ನು ದತ್ತು ಪಡೆದು ಮಾನವೀಯತೆ ಮೆರೆದಿದ್ದಾರೆಂದು ಡಾ|| ಪಾಲಾಕ್ಷ ಅವರು ತಿಳಿಸಿದರು.

## ಜಿಲ್ಲೆಯಲ್ಲಿ ತಗ್ಗಿದ ಮಳೆ ಆರ್ಭಟ: ನಿಲ್ಲದ ಹಾನಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಮಳೆಯ ಆರ್ಭಟ ಕೊಂಚ ಕಡಿಮೆಯಾಗಿದ್ದರೂ ಹಾನಿ ಮಾತ್ರ ಮುಂದುವರೆದಿದೆ. ಗೋಡೆ ಬಿದ್ದು ಮಹಿಳೆ ಸಾವು, ಕೆರೆ ಕೋಡಿ ಹೊಡೆದು ಜಮೀನು ಜಲಾವೃತ ಸೇರಿ ಅಪಾರ ಪ್ರಮಾಣದ ಹಾನಿ ಸಂಭವಿಸಿದೆ.



ಅರಕಲಗೂಡು, ಚನ್ನರಾಯಪಟ್ಟಣ, ಅರಸೀಕೆರೆ, ಸಕಲೇಶಪುರ ತಾಲ್ಲೂಕು ಭಾಗದಲ್ಲಿ ವರುಣನ ಆರ್ಭಟಕ್ಕೆ ಕೆರೆ, ಕಾಲುವೆ ನೀರು ಜಮೀನಿಗೆ ನುಗ್ಗಿ ಲಕ್ಷಾಂತರರೂ. ಬೆಳೆ ಹಾನಿ ಸಂಭವಿಸಿದೆ. ಅರಕಲಗೂಡು ತಾಲ್ಲೂಕಿನ ಮತ್ತಿಗೋಡು ಗ್ರಾಮದಲ್ಲಿ ಧಾರಾಕಾರ ಮಳೆಗೆ ಮನೆ ಗೋಡೆ ಕುಸಿದು ಬಿದ್ದು 63 ವರ್ಷದ ಜವರಮ್ಮ ಎಂಬ ಮಹಿಳೆ ಸಾವನ್ನಪ್ಪಿದ್ದಾರೆ. ಹೊಳೆನರಸೀಪುರ, ಅರಸೀಕೆರೆಯಲ್ಲಿ ಮನೆಗಳ ಗೋಡೆ ಕುಸಿದು ಹಾನಿ ಸಂಭವಿಸಿದೆ. ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಗ್ರಾಮದಲ್ಲಿ ಕಳೆದ ಒಂದು ವಾರದಿಂದ ಧಾರಾಕಾರವಾಗಿ ಸುರಿದ ಮಳೆಗೆ ಅಪಾರ ಪ್ರಮಾಣದ ಹಾನಿಯಾಗಿದ್ದು, ರೈತರ ಜಮೀನುಗಳಿಗೆ ಭಾರೀ ಪ್ರಮಾಣದಲ್ಲಿ ನೀರು ನುಗ್ಗಿ ತೋಟಗಳು ಜಲಾವೃತಗೊಂಡಿವೆ.

ಬಾಗೂರು ಗ್ರಾಮದ ಕೆರೆ ಭರ್ತಿಯಾಗಿ ಕೋಡಿ ಬಿದ್ದಿದ್ದು, ಅಪಾರ ಪ್ರಮಾಣದ ನೀರು ಹರಿಯುತ್ತಿರುವುದರಿಂದ ಕಲಸಿಂದ, ವಡ್ಡರಹಳ್ಳಿ ಮತ್ತು ಗೊಲ್ಲರಹೊಸಹಳ್ಳಿ ರಸ್ತೆ ಸಂಪರ್ಕ ಕಡಿತಗೊಂಡಿದೆ.

ಬಾಗೂರು ಬೈಪಾಸ್ ರಸ್ತೆಯಲ್ಲಿ ಮನೆಗಳಿಗೆ ನೀರು ನುಗ್ಗಿ ಮನೆಯಲ್ಲಿದ್ದ ವಸ್ತುಗಳಿಗೆ ಹಾನಿಯಾಗಿದೆ. ಆದಿಲ್ ಪಾಷಾ, ಫಾಜಲ್ ಪಾಷಾ ಮತ್ತು ರಾಮಶೆಟ್ಟಿ ಎಂಬುವವರಿಗೆ ತೆಂಗಿನ ತೋಟಗಳು ನೀರಿನಿಂದ ಜಲಾವೃತಗೊಂಡಿವೆ. ಕೆರೆ ತುಂಬಿ ಕೋಡಿ ಬಿದ್ದಿದ್ದರಿಂದ ಮೀನುಗಳು ರೈತರ ತೋಟಗಳಲ್ಲಿ ಕಾಣಿಸಿಕೊಂಡಿವೆ. ಮೀನುಗಳನ್ನು ಹಿಡಿಯಲು ಜನರು ಮುಗಿಬಿದ್ದಿದ್ದಾರೆ.

## ವೈದ್ಯಕೀಯ ಶಿಕ್ಷಣ ಸಚಿವರ ಜಿಲ್ಲಾ ಪ್ರವಾಸ

• ಪ್ರಜೋದಯ ವರದಿ

**ಹಾಸನ :** ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ ಆರ್.ಪಾಟೀಲ ಅವರು ಅ.25 ರಂದು ಜಿಲ್ಲಾ ಪ್ರವಾಸ ಮಾಡಲಿದ್ದಾರೆ.

ಶನಿವಾರ ಬೆಳಿಗ್ಗೆ 10.30 ಕ್ಕೆ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿರುವ ಶ್ರೀ ಪುಷ್ಪಗಿರಿ ಆರೋಗ್ಯ ವಿಜ್ಞಾನ ಸಂಸ್ಥೆಗಳ ಹಾಗೂ ಶ್ರೀ ಪುಷ್ಪಗಿರಿ ಇನ್ಫಿನೆಕ್ಸಾ ಸಾಫ್ಟ್‌ವೇರ್ ಕಂಪನಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 12.30 ಕ್ಕೆ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಭೇಟಿ ನೀಡಲಿ ದ್ದಾರೆ. ಮಧ್ಯಾಹ್ನ 3 ಗಂಟೆಗೆ ಹಾಸನ ಜಿಟಿಟಿಸಿ ಕೇಂದ್ರಕ್ಕೆ ಭೇಟಿ ನೀಡಲಿದ್ದಾರೆ.

## 72 ಕೋ.ರೂ. ವೆಚ್ಚದ ಕಾಮಗಾರಿಗೆ ಪಾಲಿಕೆ ಅನುಮೋದನೆ

• ಪ್ರಜೋದಯ ವರದಿ

**ಹಾಸನ:** ನಗರದ ಸರ್ವತೋಮುಖ ಅಭಿವೃದ್ಧಿಗೆ ಒಟ್ಟು 72 ಕೋ.ರೂ.ಗೂ ಅಧಿಕ ವೆಚ್ಚದ ಕಾಮಗಾರಿಗಳಿಗೆ ಮಹಾನಗರ ಪಾಲಿಕೆ ಅನುಮೋದನೆ ನೀಡಿದೆ ಎಂದು ಮೇಯರ್ ಗಿರೀಶ್ ಚನ್ನವೀರಪ್ಪ ಅವರು ಹೇಳಿದರು.

ನಗರದ ರಾಷ್ಟ್ರಕವಿ ಕುವೆಂಪು ಸಭಾಂಗಣದಲ್ಲಿ ಶುಕ್ರವಾರ ನಡೆದ ಮಹಾನಗರ ಪಾಲಿಕೆಯ ವಿಶೇಷ ಸಭೆಯಲ್ಲಿ ಕಾಮಗಾರಿಗೆ ಅನುಮೋದನೆಗೆ ಸದಸ್ಯರ ಸಮ್ಮತಿ ಪಡೆದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಗರದ ಅಭಿವೃದ್ಧಿ ಯೋಜನೆಗೆ ಎಲ್ಲಾ ಸದಸ್ಯರು ಪಕ್ಷಪಾತವಿಲ್ಲದೆ ಸರ್ವಾನುಮತದಿಂದ ಬೆಂಬಲ ನೀಡಿದ್ದಾರೆಂದರು.

ಕಳೆದ ಫೆ.7 ಮತ್ತು 18 ರಂದು ಮಾಜಿ ಮೇಯರ್ ಎಂ.ಚಂದ್ರೇಗೌಡರ ಅಧ್ಯಕ್ಷತೆಯಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಚರ್ಚಿಸಲಾದ 6 ಕೋ.ರೂ. ವೆಚ್ಚದ 37 ಕಾಮಗಾರಿಗೆ ಅನುಮೋದನೆ ನೀಡಲಾಗಿದ್ದು, ಸೆ.25ರಂದು ನಡೆದ ಸಾಮಾನ್ಯ ಸಭೆಯಲ್ಲಿ 17 ಕೋ. ರೂ. ವೆಚ್ಚದ 82 ಕಾಮಗಾರಿಗಳಿಗೆ ಸಹ ಸರ್ವಾನುಮತದಿಂದ ಅನುಮೋದನೆ ದೊರೆತಿದೆ. 24 ಕೋ. ರೂ. ಮೌಲ್ಯದ ವಿವಿಧ ಕಾಮಗಾರಿ ಗಳಿಗೆ ಸಂಬಂಧಿಸಿದ ಎರಡು ಟೆಂಡರ್ ಪ್ರಕ್ರಿಯೆಗಳಿಗೂ ಸದಸ್ಯರ ಸಮ್ಮತಿ ದೊರೆತಿದ್ದು, ಸ್ಥಳೀಯ ಶಾಸಕ ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ಡಾ. ಸೂರಜ್ ರೇವಣ್ಣ, ಸಂಸದ ಶ್ರೇಯಸ್ ಪಟೇಲ್ ಒಪ್ಪಿಗೆ ನೀಡಿದ್ದಾರೆಂದರು.



ಸ್ಥಳೀಯ ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿಯಿಂದ ರಾಜ್ಯ ಸರ್ಕಾರ 25 ಕೋ. ರೂ. ಅನುದಾನ ಬಿಡುಗಡೆ ಮಾಡುತ್ತಿದ್ದು, 6.25 ಕೋ. ರೂ. ಮೊತ್ತವನ್ನು ನಗರದ ಅಭಿವೃದ್ಧಿಗೆ ಮೀಸಲಿಡಲು ಪಾಲಿಕೆ ಅನುಮೋದನೆ ನೀಡಿ ದೆ. ಈ ಮೊತ್ತವನ್ನು ಅಗತ್ಯಾನುಸಾರ ಪ್ರತಿ ವಾರ್ಡ್‌ನ ಅಭಿವೃದ್ಧಿ ಕಾರ್ಯ ಗಳಿಗೆ ವಿನಿಯೋಗಿಸಲಾಗುವುದು. ನಗರದ ಒಳಚರಂಡಿ ವ್ಯವಸ್ಥೆ, ರಸ್ತೆ ಸುಧಾರಣೆ, ಬೀದಿ ದೀಪಗಳು, ನೀರಿನ ಯೋಜನೆಗಳು ಸೇರಿ ಹಲವು ಮೂಲಸೌಕರ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗುವುದೆಂದರು.

## ಪ್ರತ್ಯೇಕ ಪ್ರಕರಣ: 21 ಲ.ರೂ. ಬೆಲೆಯ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಅರಸೀಕೆರೆ ತಾಲ್ಲೂಕು ಗಂಡಸಿ ಹಾಗು ಹಾಸನ ಗ್ರಾಮಾಂತರ ಠಾಣೆ ವ್ಯಾಪ್ತಿಯಲ್ಲಿ ಪ್ರತ್ಯೇಕ ಮನೆಗಳವು ನಡೆದಿದ್ದು, ನಗದು ಸೇರಿ 21 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿದೆ.

ಅರಸೀಕೆರೆ ತಾಲ್ಲೂಕು ಗಂಡಸಿ ಹ್ಯಾಂಡ್ ಪೋಸ್ಟ್‌ನ ಸುಮಿತ್ರ ಎಂಬುವವರ ಮನೆಯಲ್ಲಿ 2.60 ಲಕ್ಷ ರೂ. ನಗದು ಹಾಗು 17,00,670 ರೂ. ಬೆಲೆಯ ಚಿನ್ನಾಭರಣ ಕಳವು ಮಾಡಿದ್ದಾರೆ.

ಅನಾರೋಗ್ಯದಿಂದ ಬಳಲುತ್ತಿದ್ದ ಸುಮಿತ್ರ ಅವರು ಮಾತ್ರೆ ನುಂಗಿ ಮಲಗಿದ್ದರು. ಸಂಜೆ 5 ಗಂಟೆಗೆ ಮಗಳು ರೂಮ್ ಬಾಗಿಲು ತೆರೆದು ನೋಡಿದಾಗ ಬೀರುವಿನ ಬಾಗಿಲು ತೆರೆದಿರುವುದು ಗೊತ್ತಾಗಿದೆ. ಅದನ್ನು ಪರಿಶೀಲಿಸಿದಾಗ ಹಾಡಹಗಲೇ ಕಳ್ಳರು ಮನೆಗೆ ನುಗ್ಗಿ ಕಳ್ಳತನ ಮಾಡಿರುವುದು ಗೊತ್ತಾಗಿದೆ. ಡ್ರೆಸಿಂಗ್ ಟೇಬಲ್ ಮೇಲಿಟ್ಟಿದ್ದ ಬೀರುವಿನ ಕೀ ತೆಗೆದು ಸೇಫ್ಟಿ ಲಾಕರ್‌ನಿಂದ 166 ಗ್ರಾಂ ತೂಕದ ಚಿನ್ನಾಭರಣ ಮತ್ತು ಹಣವನ್ನು ಕಳವು ಮಾಡಿಕೊಂಡು ಹೋಗಿದ್ದಾರೆ. ಈ ಸಂಬಂಧ ಗಂಡಸಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಮನೆ ಬೀಗ ಮುರಿದು ಒಳನುಗ್ಗಿರುವ ಕಳ್ಳರು ಬೀರುವಿನಲ್ಲಿಟ್ಟಿದ್ದ 1,41,750 ರೂ. ಮೌಲ್ಯದ ಚಿನ್ನಾಭರಣ ಮತ್ತು 5 ಸಾವಿರ ರೂ. ನಗದು ಕದ್ದಿರುವ ಘಟನೆ ಹಾಸನ ತಾಲ್ಲೂಕಿನ ಕೆಲವತ್ತಿ ಗ್ರಾಮದಲ್ಲಿ ಅ.23 ರಂದು ನಡೆದಿದೆ.

ಸಿದ್ದಗಂಗಮ್ಮ ಅವರ ಮನೆಯಲ್ಲಿ ಕಳ್ಳತನವಾಗಿದೆ. ಅವರು ಮನೆಗೆ ಬೀಗ ಹಾಕಿ ಸಹೋದರನ ಊರಾದ ಜಾವಗಲ್ ಹೋಬಳಿ ವೃಂದನಹಳ್ಳಿಗೆ ತೆರಳಿದ್ದರು. ವಾಪಾಸ್ ಮನೆಗೆ ಬಂದು ನೋಡಿದಾಗ ಬಾಗಿಲು ಮುರಿದಿರುವುದು ತಿಳಿದಿದೆ. 14 ಗ್ರಾಂ ತೂಕದ 2 ಜೊತೆ ಚಿನ್ನದ ಓಲೆ, 5 ಗ್ರಾಂ ತೂಕದ ಚಿನ್ನದ ತಾಳಿ, 30 ಗ್ರಾಂ ತೂಕದ ಒಂದು ಜೊತೆ ಬೆಳ್ಳಿಯ ಕುಂಕುಮ ಬಟ್ಟಲು, 10 ಗ್ರಾಂ ತೂಕದ ಬೆಳ್ಳಿ ಉಂಗುರ, 10 ಗ್ರಾಂ ತೂಕದ ಒಂದು ಬೆಳ್ಳಿಯ ಲಿಂಗದ ಕಾಯಿ, 15 ಗ್ರಾಂ ತೂಕದ ಬೆಳ್ಳಿ ಕಾಯಿನ್ ಕಳವು ಮಾಡಿದ್ದಾರೆ. ಈ ಸಂಬಂಧ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

**ಬೆಂಗಳೂರು-ಮೈಸೂರಿನ 1,185 ಭಕ್ತರಿಂದ ದರ್ಶನ | ಸ್ಥಳೀಯ ಪ್ರವಾಸಕ್ಕೆ ನಿರಾಸಕ್ತಿ**

## ಹಾಸನಾಂಬ ಟೂರ್ ಪ್ಯಾಕೇಜ್‌ಗೆ ಅಭೂತಪೂರ್ವ ಬೆಂಬಲ

• ಪ್ರಜೋದಯ ವರದಿ

**ಹಾಸನ :** ಹಾಸನಾಂಬ ಹಾಗು ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವ ಅಂಗವಾಗಿ ಪ್ರವಾಸೋದ್ಯಮ ಇಲಾಖೆ ಹಾಗು ಕೆಎಸ್‌ಆರ್‌ಟಿಸಿಯಿಂದ ಕೈಗೊಂಡಿದ್ದ ಪ್ರವಾಸಿ ಪ್ಯಾಕೇಜ್‌ಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿದೆ.

ಆದರೆ, ಜಿಲ್ಲೆಯ ಸ್ಥಳೀಯ ಪ್ರವಾಸಿ ತಾಣಗಳ ಪರಿಚಯ ದೃಷ್ಟಿಯಿಂದ ಕೈಗೊಂಡಿದ್ದ ಹಾಸನ ಟೂರ್ ಪ್ಯಾಕೇಜ್‌ಗೆ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಂಗಳೂರು, ಮೈಸೂರಿನಿಂದ ಹಾಸನಾಂಬ ದರ್ಶನಕ್ಕೆ ಭಕ್ತರನ್ನು ಕರೆತರುವಲ್ಲಿ ಪ್ರವಾಸೋದ್ಯಮ ಇಲಾಖೆ ಯಶಸ್ವಿಯಾಗಿದೆ. ಆಗಸದಿಂದ ಹಾಸನ ತೋರಿಸುವ ಹೆಲಿ ಟೂರಿಸಂಗೆ ಜನರು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದಾರೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ಸಂಸ್ಥೆಯು ಬೆಂಗಳೂರು ಹಾಗು ಮೈಸೂರಿನಿಂದ ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿತ್ತು. ಅ.10 ರಿಂದ 22ರ ವರೆಗೆ ಬಸ್‌ಗಳು ಸಂಚರಿಸಿವೆ. ಬೆಂಗಳೂರಿನಿಂದ 34 ಬಸ್‌ನಲ್ಲಿ ಒಟ್ಟು 1,113 ಜನರು ಬಂದಿದ್ದಾರೆ. ಅದೇ ರೀತಿ ಮೈಸೂರಿನಿಂದ 3 ಬಸ್‌ಗಳಲ್ಲಿ 72 ಜನರು ಬಂದಿದ್ದಾರೆ. ಒಟ್ಟು 37 ಬಸ್‌ನಿಂದ 1,185 ಭಕ್ತರು ಹಾಸನಾಂಬ ದರ್ಶನ ಪಡೆದಿದ್ದಾರೆ. ವಿಶೇಷ ಪ್ಯಾಕೇಜ್‌ನಲ್ಲಿ ಬಂದ ಭಕ್ತರಿಗೆ ಸಾವಿರ ರೂ. ಟಿಕೆಟ್ ಸಹ ನೀಡಲಾಗಿತ್ತು. ಮೈಸೂರಿನಿಂದ ಬರುವವರಿಗೆ 2150 ರೂ. ಮತ್ತು ಬೆಂಗಳೂರಿನ ಭಕ್ತರಿಗೆ 2016 ರೂ. ನಿಗದಿ ಮಾಡಲಾಗಿತ್ತು. ಹಾಸನಾಂಬ ದರ್ಶನ ಬಳಿಕ ಭಕ್ತರು ದೇವಿಗೆರೆ, ಕೆ.ಹೊಸಕೋಟೆಯಲ್ಲಿರುವ ಕೆಂಚಾಂಬ ದೇವಸ್ಥಾನ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಹೊರ ಜಿಲ್ಲೆಯ ಭಕ್ತರಿಗೆ ಪ್ರವಾಸೋದ್ಯಮ ಇಲಾಖೆ ಕೈಗೊಂಡಿರುವ ಯೋಜನೆ ಯಶಸ್ವಿಯಾಗಿದೆ.



**ಸ್ಥಳೀಯ ಪ್ರವಾಸಕ್ಕೆ ಸಿಗದ ಸ್ಪಂದನೆ**

ಪ್ರತಿವರ್ಷದಂತೆ ಈ ಬಾರಿಯೂ ಹಾಸನಾಂಬ ಜಾತ್ರಾ ಮಹೋತ್ಸವ ಅಂಗವಾಗಿ ಜಿಲ್ಲೆಯ ವಿವಿಧ ಪ್ರವಾಸಿ ತಾಣಗಳ ಪರಿಚಯಿಸಲು ಟೂರ್ ಪ್ಯಾಕೇಜ್ ಕೈಗೊಳ್ಳಲಾಗಿತ್ತಾದರೂ ಸಾರ್ವಜನಿಕರಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹತ್ತು ದಿನಗಳ ಪ್ರವಾಸಿ ಪ್ಯಾಕೇಜ್ ಅಡಿಯಲ್ಲಿ 34 ಬಸ್‌ಗಳು ಸಂಚರಿಸಿ 1240 ಜನರಷ್ಟೇ ಪ್ರವಾಸ ಮಾಡಿದ್ದಾರೆ. ಒಟ್ಟು ಎಂಟು ಪ್ಯಾಕೇಜ್‌ಗಳಲ್ಲಿ ಜಿಲ್ಲೆಯ ವಿವಿಧ ಐತಿಹಾಸಿಕ ಪ್ರವಾಸಿ ತಾಣಗಳ ಪರಿಚಯಿಸುವ ಉದ್ದೇಶ ಹೊಂದಲಾಗಿತ್ತು. ನಿತ್ಯ ಬೆಳಿಗ್ಗೆ ನಗರ ಸಾರಿಗೆ ಬಸ್‌ನಿಂದ ಹೊರಡುತ್ತಿದ್ದ ಬಸ್‌ಗಳು ನಿಗದಿತ ತಾಣಗಳ ವೀಕ್ಷಣೆ ಬಳಿಕ ಸಂಜೆ 5 ಗಂಟೆಗೆ ಪುನಃ ನಗರಕ್ಕೆ ಬರುತ್ತಿದ್ದವು. ಜಿಲ್ಲೆಯ ಜನರು ನೋಡಿರುವ ಸ್ಥಳಗಳೇ ಆದ್ದರಿಂದ ಆಸಕ್ತಿ ತೋರಲಿಲ್ಲ ಎನ್ನಲಾಗಿದೆ.

ಆಗಸದಿಂದ ಹಾಸನ ನೋಡಿದ 908 ಜನರು ನಗರದ ಹೊಸ ಬಸ್ ನಿಲ್ದಾಣದ ಚನ್ನಪಟ್ಟಣ ಕೆರೆ ಅಂಗಳದಲ್ಲಿ ಏರ್ಪಡಿಸಿದ್ದ ಹೆಲಿ ಟೂರಿಸಂಗೆ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ. ಎಂಟು ನಿಮಿಷದ ಅವಧಿಯಲ್ಲಿ ಆಗಸದಲ್ಲಿ ಹಾಸನ ನೋಡುವ ಸದಾವಕಾಶ ಇದಾಗಿತ್ತು. ಒಟ್ಟು 72 ಟ್ರಿಪ್ ಹೆಲಿಕಾಪ್ಟರ್ ಸಂಚರಿಸಿದ್ದು, 908 ಜನರು ಪ್ರಯಾಣಿಸಿದ್ದಾರೆ. ತಲಾ 4200 ರೂ. ದರ ನಿಗದಿ ಮಾಡಲಾಗಿತ್ತು.

**"ಸಾವಿರ ರೂ. ಟಿಕೆಟ್‌ನೊಂದಿಗೆ ಹಾಸನಾಂಬ ಹಾಗು ಸಪ್ತಮಾತೃಕೆಯರ ದರ್ಶನ ಮಾಡಿಸಿದ್ದರಿಂದ ಬೆಂಗಳೂರು, ಮೈಸೂರಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬಂದರು. ಆದರೆ, ಸ್ಥಳೀಯ ಪ್ರವಾಸಿ ಪ್ಯಾಕೇಜ್‌ಗೆ ಸಾರ್ವಜನಿಕರು ಆಸಕ್ತಿ ತೋರಲಿಲ್ಲ.**

**-ಅರುಣ್‌ಕುಮಾರ್ ಸಂಗಾವಿ,**
**ಪ್ರವಾಸೋದ್ಯಮ ಇಲಾಖೆ ಪ್ರಭಾರ ಉಪನಿರ್ದೇಶಕ**



## ಮಳೆಗೆ ಮನೆ ಗೋಡೆ ಕುಸಿದು ವೃದ್ಧೆ ಸಾವು

• ಪ್ರಜೋದಯ ವರದಿ

**ಅರಕಲಗೂಡು :** ವಾರದಿಂದ ಸುರಿದ ಧಾರಾಕಾರ ಮಳೆಗೆ ಮನೆ ಗೋಡೆ ಕುಸಿದು ವೃದ್ಧೆಯೊಬ್ಬರು ಸಾವನ್ನಪ್ಪಿರುವ ಘಟನೆ ತಾಲ್ಲೂಕಿನ ಮತ್ತಿಗೋಡು ಗ್ರಾಮದಲ್ಲಿ ನಡೆದಿದೆ. ಗ್ರಾಮದ ಜವರಮ್ಮ (63) ಎಂಬುವವರು ಸಾವನ್ನಪ್ಪಿದ್ದಾರೆ.



ಶುಕ್ರವಾರ ಬೆಳಿಗ್ಗೆ 5.30 ಸಮಯದಲ್ಲಿ ಮನೆಯಲ್ಲಿ ಜವರಮ್ಮ ಹಾಗು ಅವರ ಪುತ್ರ ಮಲಗಿದ್ದರು. ಈ ವೇಳೆ ಗೋಡೆ ಕುಸಿದು ಬಿದ್ದು ಜವರಮ್ಮ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಜವರಮ್ಮ ಅವರ ಪುತ್ರ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಶಾಸಕ ಎ.ಮಂಜು ಅವರು ಪರಿಶೀಲನೆ ನಡೆಸಿ, ಪರಿಹಾರ ನೀಡುವ ಭರವಸೆ ನೀಡಿದ್ದಾರೆ. ಮಹಿಳೆಯ ಮೃತದೇಹವನ್ನು ಕೊಣನೂರು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮರಣೋತ್ತರ ವೈದ್ಯಕೀಯ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು. ಕೊಣನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

C M Y K

# ಮನೆ ಖರೀದಿಸುತ್ತೀರಾ? ಕೇಂದ್ರವೇ ಕೊಡುತ್ತೆ 1.80 ಲಕ್ಷ ರೂಪಾಯಿ!

ಸ್ವಂತ ಮನೆಯನ್ನು ಖರೀದಿಸುವುದು ಅಂದ್ರೆ ಅನೇಕ ಮಂದಿಗೆ ಜೀವಮಾನದ ಬಹುದೊಡ್ಡ ಕನಸು. ಏಕೆಂದರೆ ಇದು ದುಬಾರಿ. ವರ್ಷಗಟ್ಟಲೆ ಸಾಲದ ಇಎಂಐ ಇರುತ್ತದೆ. ಹೀಗಾಗಿ ಇದರಲ್ಲಿ ಉಳಿತಾಯ ಮಾಡಲು ಸಾಧ್ಯವೇ ಎಂಬುದನ್ನು ನೀವು ಯೋಚಿಸುತ್ತಿದ್ದರೆ, ಇಂದು ಮಾರ್ಗೋಪಾಯವಿದೆ.

ಅದೇನೆಂದರೆ, ಕೇಂದ್ರ ಸರಕಾರ ಪ್ರಾಯೋಜಿತವಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ-(ನಗರ) (ಪಿಎಮ್ಎವೈ) 2.0 ಅಡಿಯಲ್ಲಿ 1 ಲಕ್ಷದ 80 ಸಾವಿರ ರುಪಾಯಿ ತನಕ ಬಡ್ಡಿ ಸಬ್ಸಿಡಿ ಪಡೆದು ಹಣವನ್ನು ಉಳಿಸಬಹುದು. ಈ ಕುರಿತ ವಿವರಗಳನ್ನು ನೋಡೋಣ. ಮೊದಲನೆಯದಾಗಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ 2.0 ಬಗ್ಗೆ ಒಂದಷ್ಟು ಮಾಹಿತಿಗಳನ್ನು ತಿಳಿದುಕೊಳ್ಳೋಣ.

ಕೇಂದ್ರ ಸರಕಾರ ಪ್ರಾಯೋಜಿತವಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ-(ನಗರ) (ಪಿಎಮ್ಎವೈ) 2.0 ಅಡಿಯಲ್ಲಿ 1 ಲಕ್ಷದ 80 ಸಾವಿರ ರುಪಾಯಿ ತನಕ ಬಡ್ಡಿ ಸಬ್ಸಿಡಿ ಪಡೆದು ಹಣವನ್ನು ಉಳಿಸಬಹುದು. ಈ ಕುರಿತ ವಿವರಗಳನ್ನು ನೋಡೋಣ. ಮೊದಲನೆಯದಾಗಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ 2.0 ಬಗ್ಗೆ ಒಂದಷ್ಟು ಮಾಹಿತಿಗಳನ್ನು ತಿಳಿದುಕೊಳ್ಳೋಣ.

2024ರ ಕೇಂದ್ರ ಬಜೆಟ್‌ನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಪಿಎಮ್ಎವೈ - 2.0 ಯೋಜನೆಯನ್ನು 5 ವರ್ಷಗಳಿಗೆ ವಿಸ್ತರಿಸಿದರು. 2024ರ ಸೆಪ್ಟೆಂಬರ್ 1ರಿಂದ ಇದು ವಿಸ್ತರಣೆಯಾಗಿದೆ. ನಗರ, ಪಟ್ಟಣ ಪ್ರದೇಶಗಳಲ್ಲಿ ಮನೆಗಳನ್ನು ಹೊಂದುವವರಿಗೆ ಇದು ಸಹಕಾರಿಯಾಗಿದೆ. ಈ ಯೋಜನೆಯ ಅಡಿಯಲ್ಲಿ ಮನೆ ನಿರ್ಮಾಣ, ಪಾಲುದಾರಿಕೆಯಲ್ಲಿ ಅಫೋರ್ಡಬಲ್ ಹೌಸಿಂಗ್ ಯೋಜನೆ, ಅಫೋರ್ಡಬಲ್ ರೆಂಟಲ್ ಹೌಸಿಂಗ್ ಮತ್ತು ಬಡ್ಡಿ ಸಬ್ಸಿಡಿ ಸ್ಕೀಮ್ ಇದೆ. ಅರ್ಹ ಫಲಾನುಭವಿಗಳು ಇದರ ಪ್ರಯೋಜನವನ್ನು ಪಡೆಯಬಹುದು.

**ಏನಿದು ಬಡ್ಡಿ ಸಬ್ಸಿಡಿ ಸ್ಕೀಮ್?:** ಆರ್ಥಿಕವಾಗಿ ಹಿಂದುಳಿದವರಿಗೆ ಗೃಹ ಸಾಲದಲ್ಲಿ ಬಡ್ಡಿ ಸಬ್ಸಿಡಿಯನ್ನು ಈ ಇಂಟರೆ ಸಬ್ಸಿಡಿ ಸ್ಕೀಮ್ ಒದಗಿಸುತ್ತದೆ. ಇಡಬ್ಲ್ಯುಎಸ್, ಎಲ್ಐಜಿ ಮತ್ತು ಎಮ್ಐಜಿ, ಮತ್ತು ಕೆಟಗರಿಯ ಅರ್ಹ ಫಲಾನುಭವಿಗಳು ಗೃಹ ಸಾಲ ಪಡೆಯುವಾಗ, ಈ ಯೋಜನೆಯ ಅಡಿಯಲ್ಲಿ ಅಸಲು ಮೊತ್ತಕ್ಕೆ 1 ಲಕ್ಷದ 80 ಸಾವಿರ ರುಪಾಯಿ ತನಕ ಬಡ್ಡಿ ಸಬ್ಸಿಡಿಯನ್ನು ಪಡೆಯಬಹುದು.

ಆಗ ಅಸಲು ಮೊತ್ತವು ಕಡಿಮೆಯಾಗುವುದರಿಂದ ಗೃಹ ಸಾಲದ ಇಎಂಐ ಕೂಡ ಕಡಿಮೆಯಾಗುತ್ತದೆ. ವಾರ್ಷಿಕ 3 ಲಕ್ಷ ರುಪಾಯಿ, 6 ಲಕ್ಷ ರುಪಾಯಿ ಮತ್ತು 9 ಲಕ್ಷ ರುಪಾಯಿ ಆದಾಯ ಇರುವವರು ಯೋಜನೆಯ ಪ್ರಯೋಜನವನ್ನು ಪಡೆಯಬಹುದು.

**ಬಡ್ಡಿ ಸಬ್ಸಿಡಿ ಸ್ಕೀಮ್‌ನ ಮುಖ್ಯಾಂಶಗಳು:** ಈ ಯೋಜನೆಯಡಿಯಲ್ಲಿ ಶೇ.4ರಷ್ಟು ಬಡ್ಡಿ ಸಬ್ಸಿಡಿ ಸಿಗುತ್ತದೆ. ಒಟ್ಟು ಸಬ್ಸಿಡಿ ಮೊತ್ತವು 1 ಲಕ್ಷದ 80 ಸಾವಿರ ರುಪಾಯಿ ತನಕ ಇರುತ್ತದೆ. ಸಬ್ಸಿಡಿಯನ್ನು 5 ವರ್ಷಗಳ ಕಂತಿನಲ್ಲಿ ಬಿಡುಗಡೆ ಮಾಡಲಾಗುತ್ತದೆ. ಫಲಾನುಭವಿಯ ಸಾಲದ ಖಾತೆಗೆ ಡಿಬಿಟಿ ಮೂಲಕ ವರ್ಗಾವಣೆಯಾಗುತ್ತದೆ. ಸಾಲದ ಅಸಲು ಮೊತ್ತದಿಂದ ಬಡ್ಡಿ ಸಬ್ಸಿಡಿ ಮೊತ್ತವನ್ನು ಕಡಿತಗೊಳಿಸಲಾಗುತ್ತದೆ. ಸಾಲದ ಮರುಪಾವತಿಯ ಅವಧಿ 5 ವರ್ಷಕ್ಕಿಂತ ಹೆಚ್ಚು ಇದ್ದರೆ ಈ ಬಡ್ಡಿ ಸಬ್ಸಿಡಿ ಸಿಗುತ್ತದೆ. ಸಾಲದ ಮೊದಲ 8 ಲಕ್ಷ ರುಪಾಯಿಗೆ ಶೇ.4ರಷ್ಟು ಬಡ್ಡಿ ಸಬ್ಸಿಡಿ ಸಿಗುತ್ತದೆ.


**ಬಡ್ಡಿ ಸಬ್ಸಿಡಿಗೆ ಗರಿಷ್ಠ**

**ಗೃಹಸಾಲ ಅರ್ಹತೆ:** 25 ಲಕ್ಷ ರುಪಾಯಿ. ಮನೆಯ ಗರಿಷ್ಠ ಮೌಲ್ಯ: 35 ಲಕ್ಷ ರುಪಾಯಿ. ಗರಿಷ್ಠ ಕಾರ್ಪೆಟ್ ಏರಿಯಾ: 120 ಚದರ ಮೀಟರ್. ನಿಮ್ಮ ಗೃಹ ಸಾಲದಲ್ಲಿ 25 ಲಕ್ಷ ರುಪಾಯಿ ತನಕದ ಮೊತ್ತಕ್ಕೆ ಮಾತ್ರ ಬಡ್ಡಿ ಸಬ್ಸಿಡಿ ಸಿಗುತ್ತದೆ. ಅದಕ್ಕಿಂತ ಹೆಚ್ಚಿನ ಮೊತ್ತಕ್ಕೆ ಸಿಗುವುದಿಲ್ಲ. ಅದೇ ರೀತಿ ಆಸ್ತಿಯ ಮೌಲ್ಯದಲ್ಲಿ 35 ಲಕ್ಷ ರುಪಾಯಿ ತನಕದ ಮೌಲ್ಯ ಮಾತ್ರ ಸಬ್ಸಿಡಿ ಪಡೆಯಲು ಅರ್ಹವಾಗುತ್ತದೆ.

2024 ಸೆಪ್ಟೆಂಬರ್ 1ರಿಂದ ಮಂಜೂರಾಗಿರುವ ಗೃಹ ಸಾಲಕ್ಕೆ ಲಭ್ಯ. 2029 ತನಕ ಇದಕ್ಕೆ ಅವಧಿ ಇದೆ. ಮನೆಯ ಖರೀದಿ, ಮರು-ಖರೀದಿ, ನಿರ್ಮಾಣಕ್ಕೆ ಲಭ್ಯ. ಫಲಾನುಭವಿಗೆ ಈಗಾಗಲೇ ಸ್ವಂತ ಪಕ್ಕಾ ಮನೆ ಇರಬಾರದು.

**ವಾರ್ಷಿಕ ಆದಾಯ ಎಷ್ಟಿರಬೇಕು?:** ಆರ್ಥಿಕವಾಗಿ ದುರ್ಬಲ ವರ್ಗದ ಜನರಿಗೆ (Economically weaker sections- EWS) ವಾರ್ಷಿಕ 3 ಲಕ್ಷ ರುಪಾಯಿ ಒಳಗೆ ಆದಾಯ ಇದ್ದರೆ ಬಡ್ಡಿ ಸಬ್ಸಿಡಿ ಸಿಗುತ್ತದೆ. ಆದ್ದರಿಂದ ವರ್ಷಕ್ಕೆ 3 ಲಕ್ಷ ರುಪಾಯಿ ತನಕ ಆದಾಯ ಇರುವವರು ಇಡಬ್ಲ್ಯುಎಸ್ ಕೆಟಗರಿಗೆ ಬರುತ್ತಾರೆ. ಕಡಿಮೆ ಆದಾಯ ಗ್ರೂಪ್‌ನಲ್ಲಿ (Low Income Group) ವಾರ್ಷಿಕ 3 -6 ಲಕ್ಷ ರು. ಆದಾಯ ಇರುವವರಿಗೆ ಬಡ್ಡಿ ಸಬ್ಸಿಡಿ ದೊರೆಯುತ್ತದೆ. ಮೂರನೆಯದಾಗಿ, ಮಧ್ಯಮ ಆದಾಯ ಗ್ರೂಪ್‌ನಲ್ಲಿ (Middle Income Group- MIG) ವಾರ್ಷಿಕ 6-9 ಲಕ್ಷ ರುಪಾಯಿ ಆದಾಯದ ಒಳಗಿರುವವರಿಗೆ ಬಡ್ಡಿ ಸಬ್ಸಿಡಿ ಸಿಗುತ್ತದೆ.

**ಸಬ್ಸಿಡಿಗೆ ಅರ್ಜಿ ಸಲ್ಲಿಸುವುದು ಹೇಗೆ?:** ಪ್ರಧಾನ ಮಂತ್ರಿ ಆವಾಸ್ ಯೋಜನಾ-ಅರ್ಬನ್ 2.0 ಸ್ಕೀಮ್ ಅಡಿಯಲ್ಲಿ ಅರ್ಜಿ ಸಲ್ಲಿಸಲು : https://pmay-mis.gov.in ವೆಬ್ ಪೋರ್ಟಲ್ ಅನ್ನು ಬಳಸಬೇಕು. ಈ ವೆಬ್‌ಸೈಟ್‌ನಲ್ಲಿ ಬಡ್ಡಿ ಸಬ್ಸಿಡಿಯ ಲೆಕ್ಕಾಚಾರ ತಿಳಿದುಕೊಳ್ಳಲು ಕ್ಯಾಲ್ಕ್ಯುಲೇಟರ್ ಕೂಡ ಇದೆ.




ಅದರ ಮೂಲಕ ನಿಮಗೆ ಎಷ್ಟು ಸಬ್ಸಿಡಿ ಸಿಗುತ್ತದೆ ಎಂಬುದನ್ನು ತಿಳಿದುಕೊಳ್ಳಬಹುದು. ಹಾಗಾದರೆ 1 ಲಕ್ಷದ 80 ಸಾವಿರ ರುಪಾಯಿ ಸಬ್ಸಿಡಿ ಹೇಗೆ ಸಿಗುತ್ತದೆ ಎಂಬ ಲೆಕ್ಕಾಚಾರ ನೋಡೋಣ. ನಿಮ್ಮ ವಾರ್ಷಿಕ ಆದಾಯ 9 ಲಕ್ಷ ರುಪಾಯಿ ಇದೆ ಎಂದು ಇಟ್ಟುಕೊಳ್ಳಿ. 25 ಲಕ್ಷ ರುಪಾಯಿ ತನಕ ಸಾಲದ ಮೊತ್ತಕ್ಕೆ ಸಬ್ಸಿಡಿ ಸಿಗುತ್ತದೆ. ಸಾಲದ ಅವಧಿ 144 ತಿಂಗಳು ಅಥವಾ 12 ವರ್ಷ ಹಾಗೂ ಕಾರ್ಪೆಟ್ ಏರಿಯಾ 50 ಸ್ಕ್ವೇರ್ ಮೀಟರ್ ಎಂದು ಇಟ್ಟುಕೊಳ್ಳಿ. ಆಗ ನಿಮ್ಮ ಆದಾಯ ಗ್ರೂಪ್ ಎಂಐಜಿಗೆ ಬರುತ್ತದೆ. ಒಟ್ಟು 180000 ರುಪಾಯಿ ಸಬ್ಸಿಡಿ ಪಡೆಯುತ್ತೀರಿ. ಪ್ರತಿ ವರ್ಷ 36000 ರುಪಾಯಿಗಳಂತೆ ಕಂತಿನಲ್ಲಿ ಸಬ್ಸಿಡಿ ಪಡೆಯುತ್ತೀರಿ.

**ಸಣ್ಣ ಉಳಿತಾಯಕ್ಕೆ ಸಿಗುತ್ತೆ 70 ಲಕ್ಷ:** ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಯೋಜನೆಗಳ ಬಗ್ಗೆ ಜನಜಾಗೃತಿ ಅವಶ್ಯಕ. ಇಂಥ ಮತ್ತೊಂದು ಉದಾಹರಣೆ ಸುಕನ್ಯಾ ಸಮೃದ್ಧಿ ಯೋಜನೆ. ಪ್ರತಿ ವರ್ಷ ಸಣ್ಣ ಮೊತ್ತವೊಂದನ್ನು ನಿಮ್ಮ ಮಗಳ ಹೆಸರಿನಲ್ಲಿ ಠೇವಣಿ ಇಟ್ಟರೆ ಪುತ್ರಿಯ ಭವಿಷ್ಯಕ್ಕೆ ಗಣನೀಯ ನೆರವಾಗುತ್ತದೆ. ಅಂದಾಜು 70 ಲಕ್ಷ ರುಪಾಯಿ ತನಕ ನಿಧಿ ಸಿಗುತ್ತದೆ.

ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ಭವಿಷ್ಯದ ಆರ್ಥಿಕ ಭದ್ರತೆ ಒದಗಿಸಲು ಸುಕನ್ಯಾ ಸಮೃದ್ಧಿ ಸಹಕರಿಸುತ್ತದೆ. 2015ರಲ್ಲಿ ಬೇಟಿ ಬಚಾವೊ-ಬೇಟಿ ಪಢಾವೊ ಅಭಿಯಾನದ ಅಡಿಯಲ್ಲಿ ಜಾರಿಗೆ ಬಂದಿರುವ ಯೋಜನೆ ಇದಾಗಿದೆ. ಹಳೆಯ ತೆರಿಗೆ ಪದ್ಧತಿಯಲ್ಲಿ ಇದಕ್ಕೆ ಟ್ಯಾಕ್ ಬೆನಿಫಿಟ್ ಕೂಡ ದೊರೆಯುತ್ತದೆ. ಸದ್ಯಕ್ಕೆ ಶೇ.8.2ರಷ್ಟು ಬಡ್ಡಿ ಸಿಗುತ್ತದೆ. ಇದು ಸಣ್ಣ ಉಳಿತಾಯ ಯೋಜನೆಗಳಲ್ಲಿಯೇ ಗರಿಷ್ಠ ಎನ್ನುವುದನ್ನು ಗಮನಿಸಬಹುದು. ಹಾಗಾದರೆ ಸುಕನ್ಯಾ ಸಮೃದ್ಧಿ ಯೋಜನೆಯ ಮುಖ್ಯಾಂಶಗಳನ್ನು ನೋಡೋಣ. ಹೆಣ್ಣು ಮಗುವಿನ ವಯಸ್ಸು 10 ವರ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು. ವಾರ್ಷಿಕ ಕನಿಷ್ಠ ಹೂಡಿಕೆ 250 ರುಪಾಯಿಗಳು.

ವರ್ಷಕ್ಕೆ ಗರಿಷ್ಠ 1.5 ಲಕ್ಷ ರುಪಾಯಿ ಹೂಡಿಕೆ ಮಾಡಬಹುದು. ಖಾತೆ ತೆರೆದ ಬಳಿಕ 15 ವರ್ಷ ತನಕ ಇನ್ವೆ ಮಾಡಬಹುದು. ಮಗಳಿಗೆ 21 ವರ್ಷ ಭರ್ತಿಯಾದಾಗ ಖಾತೆ ಮೆಚ್ಯೂರ್ ಆಗುತ್ತದೆ. 21 ವರ್ಷಕ್ಕೆ ಮೊದಲೇ ಮದುವೆಯಾದರೆ ಅಕೌಂಟ್ ಆಗ ಕ್ಲೋಸ್ ಆಗುತ್ತದೆ. ಪುತ್ರಿಗೆ 21 ವರ್ಷ ಆದಾಗ ಎಷ್ಟು ಹಣವನ್ನು ನಿರೀಕ್ಷಿಸಬಹುದು ಎಂದರೆ ನಿಮಗೆ ಅಚ್ಚರಿಯಾಗಬಹುದು.

ಪೋಷಕರು ತಮ್ಮ 5 ವರ್ಷ ಮಗಳ ಹೆಸರಿನಲ್ಲಿ ಸುಕನ್ಯಾ ಸಮೃದ್ಧಿ ಅಡಿಯಲ್ಲಿ ಪ್ರತಿ ವರ್ಷ 1.5 ಲಕ್ಷ ರುಪಾಯಿಗಳನ್ನು ಹೂಡಿಕೆ ಮಾಡಿದರೆ, 15 ವರ್ಷ ಆದಾಗ 22.5 ಲಕ್ಷ ರುಪಾಯಿ ಒಟ್ಟು ಕಟ್ಟಿದಂತಾಗುತ್ತದೆ. ವಾರ್ಷಿಕ ಸರಾಸರಿ ಶೇ. 8.2ರ ಬಡ್ಡಿ ದರದ ಆಧಾರದಲ್ಲಿ ನಿಮ್ಮ ಹೂಡಿಕೆ 21 ವರ್ಷದಲ್ಲಿ 70 ಲಕ್ಷ ರುಪಾಯಿಗೆ ಬೆಳೆದಿರುತ್ತದೆ. ಹಾಗಾದರೆ ವರ್ಷಕ್ಕೆ 6 ಪರ್ಸೆಂಟ್ ಹಣದುಬ್ಬರದ ಲೆಕ್ಕಾಚಾರದಲ್ಲಿ 21 ವರ್ಷದ ಬಳಿಕ 70 ಲಕ್ಷದ ಖರೀದಿ ಸಾಮರ್ಥ್ಯವು ಇವತ್ತಿನ 20-22 ಲಕ್ಷಕ್ಕೆ ಸಮಾನವಲ್ಲವೇ ಎಂದು ನೀವು ಕೇಳಬಹುದು.



ಆದರೂ ಇದು ಜಾಣ್ಮೆಯ ನಿರ್ಧಾರ ಎನ್ನಬಹುದು. ಏಕೆಂದರೆ ಸುಕನ್ಯಾ ಸಮೃದ್ಧಿಗೆ ಕೇಂದ್ರ ಸರಕಾರದ ಬೆಂಬಲ ವಿದ್ದು ಅತ್ಯಂತ ಸುರಕ್ಷಿತವಾಗಿದೆ. ಆದ್ದರಿಂದ ಮಗಳ ಭವಿಷ್ಯಕ್ಕೆ ಸುಭದ್ರ ಬುನಾದಿ ಹಾಕಲು ಇದು ಸೂಕ್ತ ಆಯ್ಕೆ ಎನ್ನಬಹುದು.

ಕುಟುಂಬವೊಂದರಲ್ಲಿ ಇಬ್ಬರು ಹೆಣ್ಣು ಮಕ್ಕಳ ಹೆಸರಿನಲ್ಲಿ ಸುಕನ್ಯಾ ಸಮೃದ್ಧಿ ಖಾತೆ ತೆರೆಯಬಹುದು. ಅವಳಿ ಅಥವಾ ತ್ರಿವಳಿ ಮಕ್ಕಳಿದ್ದರೆ ವಿಶೇಷ ಕಂಡೀಶನ್ ಅಡಿಯಲ್ಲಿ ಎರಡಕ್ಕಿಂತ ಹೆಚ್ಚು ಹೆಣ್ಣು ಮಕ್ಕಳ ಹೆಸರಿನಲ್ಲಿ ಖಾತೆ ತೆರೆಯಬಹುದು. ಅಂಚೆ ಕಚೇರಿಗಳಲ್ಲಿ, ಪ್ರಮುಖ ಬ್ಯಾಂಕುಳಲ್ಲಿ ಸುಕನ್ಯಾ ಸಮೃದ್ಧಿ ಖಾತೆ ಸೌಲಭ್ಯವಿದೆ. ಅದನ್ನು ಪಡೆದುಕೊಳ್ಳಬಹುದು.

**ಚಿನ್ನ-ಬೆಳ್ಳಿಯಲ್ಲಿ ಹೂಡಿಕೆ:** ಕಳೆದ ಒಂದು ವರ್ಷದಲ್ಲಿ ಚಿನ್ನ 68 ಪರ್ಸೆಂಟ್ ಹಾಗೂ ಬೆಳ್ಳಿ 82 ಪರ್ಸೆಂಟ್ ರಿಟರ್ನ್ ಕೊಟ್ಟಿರುವುದರಿಂದ ನಿಮಗೆ ಈ ಎರಡು ಅಮೂಲ್ಯ ಲೋಹಗಳಲ್ಲಿ ಇನ್ವೆ ಮಾಡಬೇಕು ಎಂಬ ಉದ್ದೇಶ ಇರಬಹುದು. ಆದರೆ ಇವೆರಡೂ ದುಬಾರಿಯಲ್ಲವೇ ಎನ್ನಿಸಬಹುದು.

ಆದರೆ ಮ್ಯೂಚುವಲ್ ಫಂಡ್‌ಗಳ ಮೂಲಕ ಸಣ್ಣ ಮೊತ್ತದಿಂದ ಚಿನ್ನ-ಬೆಳ್ಳಿಗಳಲ್ಲಿ ಹೂಡಿಕೆ ಮಾಡಬಹುದು. ಪ್ರತಿ ತಿಂಗಳೂ ಕೇವಲ 100 ರುಪಾಯಿಗಳ ಸಿಪ್ (ವ್ಯವಸ್ಥಿತ ಹೂಡಿಕೆ ಯೋಜನೆ) ಮೂಲಕ ಹೂಡಿಕೆ ಆರಂಭಿಸಬಹುದು. ಗೋಲ್ಡ್ ಮತ್ತು ಸಿಲ್ವರ್ ಮ್ಯೂಚುವಲ್ ಫಂಡ್‌ಗಳಿಗೆ ಉದಾಹರಣೆಗಳು ಇಲ್ಲಿವೆ- ಮೋತಿಲಾಲ್ ಓಸ್ವಾಲ್ ಗೋಲ್ಡ್ ಆಂಡ್ ಸಿಲ್ವರ್ ಇಟಿಎಫ್ ಎಫ್ ಆಂಡ್ ಎಫ್ ಫಂಡ್, ಎಡಿಲ್ವೈಸ್ ಗೋಲ್ಡ್ ಆಂಡ್ ಸಿಲ್ವರ್ ಇಟಿಎಫ್ ಎಫ್ ಓಎಫ್ ಫಂಡ್, ಮಿರಾಯ್ ಅಸೆಟ್ ಗೋಲ್ಡ್ ಸಿಲ್ವರ್ ಪ್ಯಾಸಿವ್ ಎಫ್ ಓಎಫ್, ಕೋಟಕ್ ಗೋಲ್ಡ್ ಆಂಡ್ ಸಿಲ್ವರ್ ಫಂಡ್.

- **ಕೇಶವ** ಪ್ರಸಾದ್ ಬಿ

> ಕೇಂದ್ರ ಸರಕಾರ ಪ್ರಾಯೋಜಿತವಾದ ಪ್ರಧಾನ ಮಂತ್ರಿ ಆವಾಸ್ ಯೋಜನೆ-(ನಗರ)(ಪಿಎಮ್ಎವೈ) 2.0 ಅಡಿಯಲ್ಲಿ 1 ಲಕ್ಷದ 80 ಸಾವಿರ ರುಪಾಯಿ ತನಕ ಬಡಿ ಸಬಿಡಿ ಪಡೆದು ಹಣವನ್ನು ಉಳಿಸಬಹುದು. ಈ ಕುರಿತೆ ವಿವರಗಳನ್ನು ನೋಡೋಣ. ಮೊದಲನೆಯದಾಗಿ, ಪ್ರಧಾನ ಮಂತ್ರಿ ಆವಾಸ್ ಯೋಜನೆ-ನಗರ 2.0 ಬಗ್ಗೆ ಒಂದಷ್ಟು ಮಾಹಿತಿಗಳನ್ನು ತಿಳಿದುಕೊಳ್ಳೋಣ.

### ಸಣ್ಣ ಉಳಿತಾಯ

- ಜನ ಸಾಮಾನ್ಯರಿಗೆ ಅನುಕೂಲ ಮಾಡಿಕೊಡುವ ಯೋಜನೆಗಳ ಬಗ್ಗೆ ಜನಜಾಗೃತಿ ಅವಶ್ಯಕ.
- ಇಂಥ ಮತ್ತೊಂದು ಉದಾಹರಣೆ ಸುಕನ್ಯಾ ಸಮೃದ್ಧಿ ಯೋಜನೆ.
- ಪ್ರತಿ ವರ್ಷ ಸಣ್ಣ ಮೊತ್ತವೊಂದನ್ನು ನಿಮ್ಮ ಮಗಳ ಹೆಸರಿನಲ್ಲಿ ಠೇವಣಿ ಇಟ್ಟರೆ ಪುತ್ರಿಯ ಭವಿಷ್ಯಕ್ಕೆ ಗಣನೀಯ ನೆರವಾಗುತ್ತದೆ.
- ಅಂದಾಜು 70 ಲಕ್ಷ ರುಪಾಯಿ ತನಕ ನಿಧಿ ಸಿಗುತ್ತದೆ.
- ಹೆಣ್ಣು ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಲು, ಭವಿಷ್ಯದ ಆರ್ಥಿಕ ಭದ್ರತೆ ಒದಗಿಸಲು ಸುಕನ್ಯಾ ಸಮೃದ್ಧಿ ಸಹಕರಿಸುತ್ತದೆ.
- 2015ರಲ್ಲಿ ಬೇಟಿ ಬಚಾವೊ-ಬೇಟಿ ಪಢಾವೊ ಅಭಿಯಾನದ ಅಡಿಯಲ್ಲಿ ಜಾರಿಗೆ ಬಂದಿರುವ ಯೋಜನೆ ಇದಾಗಿದೆ.
- ಹಳೆಯ ತೆರಿಗೆ ಪದ್ಧತಿಯಲ್ಲಿ ಇದಕ್ಕೆ ಟ್ಯಾಕ್ ಬೆನಿಫಿಟ್ ಕೂಡ ದೊರೆಯುತ್ತದೆ.
- ಸದ್ಯಕ್ಕೆ ಶೇ.8.2ರಷ್ಟು ಬಡ್ಡಿ ಸಿಗುತ್ತದೆ.
- ಇದು ಸಣ್ಣ ಉಳಿತಾಯ ಯೋಜನೆಗಳಲ್ಲಿಯೇ ಗರಿಷ್ಠ ಎನ್ನುವುದನ್ನು ಗಮನಿಸಬಹುದು.
- ಹಾಗಾದರೆ ಸುಕನ್ಯಾ ಸಮೃದ್ಧಿ ಯೋಜನೆಯ ಮುಖ್ಯಾಂಶಗಳನ್ನು ನೋಡೋಣ.
- ಹೆಣ್ಣು ಮಗುವಿನ ವಯಸ್ಸು 10 ವರ್ಷ ಅಥವಾ ಅದಕ್ಕಿಂತ ಕಡಿಮೆ ಇರಬೇಕು.
- ವಾರ್ಷಿಕ ಕನಿಷ್ಠ ಹೂಡಿಕೆ 250 ರುಪಾಯಿಗಳು.
- ವರ್ಷಕ್ಕೆ ಗರಿಷ್ಠ 1.5 ಲಕ್ಷ ರುಪಾಯಿ ಹೂಡಿಕೆ ಮಾಡಬಹುದು.

## 25-10-2025 ದಿನ ಭವಿಷ್ಯ

**ಮೇಷ:** ದೇಹದ ನೋವಿನಿಂದ ಬಳಲುವ ಸಾಧ್ಯತೆ ಹೆಚ್ಚಿದೆ. ನಿಮ್ಮ ದೇಹದ ಮೇಲೆ ಹೆಚ್ಚು ಒತ್ತಡ ಹಾಕುವ ಯಾವುದೇ ದೈಹಿಕ ಪರಿಶ್ರಮವನ್ನು ತಪ್ಪಿಸಲು ಪ್ರಯತ್ನಿಸಿ. ಸಾಕಷ್ಟು ವಿಶ್ರಾಂತಿ ತೆಗೆದುಕೊಳ್ಳಿ. ನೀವು ಸ್ವಲ್ಪ ಹೆಚ್ಚುವರಿ ಹಣ ಮಾಡಲು ಯೋಜಿಸುತ್ತದ್ದಲ್ಲಿ ಸುಭದ್ರ ಆರ್ಥಿಕ ಯೋಜನೆಗಳಲ್ಲಿ ಹೂಡಿಕೆ ಮಾಡಿ.

**ವೃಷಭ:** ನಿಮ್ಮ ದೊಡ್ಡ ಆಸ್ತಿಯೆಂದರೆ ನಿಮ್ಮ ಹಾಸ್ಯಪ್ರಜ್ಞೆಯಾಗಿದೆ ಇದನ್ನು ನಿಮ್ಮ ಅನಾರೋಗ್ಯ ಗುಣಪಡಿಸಲು ಬಳಸಲು ಪ್ರಯತ್ನಿಸಿ. ಯೋಜಿತವಲ್ಲದ ಮೂಲಗಳಿಂದ ಹಣದ ಲಾಭ ನಿಮ್ಮ ದಿನವನ್ನು ಬೆಳಗಿಸುತ್ತದೆ. ಕುಟುಂಬದ ಸದಸ್ಯರ ಅಗತ್ಯಗಳಿಗೆ ಆದ್ಯತೆ ನೀಡಿ. ಇಂದು ತಮ್ಮ ಆಲೋಚನೆಗಳನ್ನು ತೀಕ್ಷ್ಣ ಗೊಳಿಸಲು ನೀವು ಒಬ್ಬ ಶ್ರೇಷ್ಠ ವ್ಯಕ್ತಿಯ ಜೀವನವನ್ನು ಓದಬಹುದು.

**ಮಿಥುನ:** ನೀವು ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚಿದ್ದು ಇದು ನಿಮ್ಮನ್ನು ಕ್ರೀಡಾ ಸ್ಪರ್ಧೆಗಳಲ್ಲಿ ಭಾಗವಹಿಸಲು ಸಕ್ರಿಯಗೊಳಿಸುತ್ತದೆ. ಇಂದು ಹಣಕಾಸಿನ ಭಾಗವು ಉತ್ತಮವಾಗಿರುತ್ತದೆ ಆದರೆ ಇದರೊಂದಿಗೆ ನೀವು ನಿಮ್ಮ ಹಣವನ್ನು ವ್ಯರ್ಥವಾಗಿ ಖರ್ಚು ಮಾಡದಂತೆ ನೋಡಿಕೊಳ್ಳಬೇಕು.

**ಕರ್ಕಾಟಕ:** ಕಣ್ಣಿನ ಪೊರೆ ರೋಗಿಗಳಿಗೆ ಧೂಮಪಾನವು ಅವರ ಕಣ್ಣುಗಳಿಗೆ ಮತ್ತಷ್ಟು ಹಾನಿಯುಂಟುಮಾಡಬಹುದಾದ್ದರಿಂದ ಅವರು ಕಲುಷಿತ ಪರಿಸರದಲ್ಲಿ ಹೋಗಬಾರದು. ಸಾಧ್ಯವಾದರೆ ಸೂರ್ಯನ ಬೆಳಕಿಗೆ ಅತಿಯಾದ ಒಡ್ಡಿಕೊಳ್ಳುವಿಕೆಯನ್ನು ತಪ್ಪಿಸಿ. ಹಣವನ್ನು ಯೋಚಿಸದೆ ಮತ್ತು ಪರಿಗಣಿಸದೆ ಖರ್ಚುಮಾಡುವುದು, ನಿಮಗೆ ಎಷ್ಟು ನಷ್ಟ ಮಾಡಬಹುದು.

**ಸಿಂಹ:** ಮಾದಕವಸ್ತುವಿನ ಅವಲಂಬನೆ ಹೆಚ್ಚುವ ಸಾಧ್ಯತೆಗಳಿರುವುದರಿಂದ ಸ್ವಯಂ ಔಷಧೋಪಚಾರ ಮಾಡಬೇಡಿ. ದೀರ್ಘಕಾಲದ ದೃಷ್ಟಿಕೋನದಿಂದ ಹೂಡಿಕೆ ಮಾಡಬೇಕು. ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ. ಒಂಟಿತನ ಮತ್ತು ಖಿನ್ನತೆಯ ಭಾವನೆ ಅಳಿಸಿ ಹಾಕಿ ಅವರಿಗೆ ತಾವು ಅಮೂಲ್ಯವೆಂದು ಭಾವನೆ ಬರುವ ಹಾಗೆ ಮಾಡಿ.

**ಕನ್ಯಾ:** ಮಾತನಾಡುವ ಮುನ್ನ ಯೋಚಿಸಿ. ತಿಳಿಯದೆ ನಿಮ್ಮ ಅಭಿಪ್ರಾಯಗಳು ಬೇರೊಬ್ಬರ ಭಾವನೆಗಳಿಗೆ ಧಕ್ಕೆಯುಂಟು ಮಾಡಬಹುದು. ನಿಮ್ಮ ವೆಚ್ಚಗಳನ್ನು ನಿಯಂತ್ರಿಸಲು ಪ್ರಯತ್ನಿಸಿ ಮತ್ತು ಇಂದು ತುಂಬಾ ಖರ್ಚು ಮಾಡಬೇಡಿ. ನಿಮ್ಮನ್ನು ದೀರ್ಘಕಾಲ ಹಿಡಿದಿಟ್ಟಿರುವ ಒಂದು ಏಕಾಂಗಿ ಹಂತ ನಿಮ್ಮ ಜೀವನ ಸಂಗಾತಿ ದೊರಕಿದ ತಕ್ಷಣ ಕೊನೆಗೊಳ್ಳುತ್ತದೆ.

**ತುಲಾ:** ನಿಮ್ಮ ನಿರಂತರ ಸಕಾರಾತ್ಮಕ ಚಿಂತನೆಯನ್ನು ಪ್ರಶಂಸಿಸಲಾಗುತ್ತದೆ. ನಿಮ್ಮ ಪ್ರಯತ್ನದಲ್ಲಿ ನೀವು ಯಶಸ್ವಿಯಾಗಬಹುದು. ಈ ರಾಶಿಚಕ್ರದ ವಿವಾಹಿತ ಜನರಿಗೆ ಇಂದು ಅತ್ತೆಮನೆಯ ಕಡೆಯಿಂದ ಹಣದ ಪ್ರಯೋಜನವಾಗುವ ಸಾಧ್ಯತೆ ಇದೆ. ಇಂದಿನ ದಿನ ಪ್ರೀತಿಯ ಬಣ್ಣಗಳಲ್ಲಿ ಮುಳುಗಿರುತ್ತದೆ.

**ವೃಶ್ಚಿಕ:** ನೀವು ಹೇರಳ ಶಕ್ತಿಯನ್ನು ಹೊಂದಿರುತ್ತೀರಿ - ಆದರೆ ಕೆಲಸದ ಒತ್ತಡ ನಿಮ್ಮನ್ನು ಉದ್ವಿಗ್ನಗೊಳಿಸುವಂತೆ ತೋರುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಸೇರಿ ಇಂದು ನೀವು ಭವಿಷ್ಯಕ್ಕೆ ಯಾವುದೇ ಆರ್ಥಿಕ ಯೋಜನೆಯನ್ನು ಮಾಡಬಹುದು ಮತ್ತು ಈ ಯೋಜನೆ ಯಶಸ್ವಿಯಾಗಲಿದೆ ಎಂದು ಭರವಸೆ ಇದೆ. ಸಾಮಾಜಿಕ ಕೂಟಗಳಲ್ಲಿ ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮನ್ನು ಜನಪ್ರಿಯಗೊಳಿಸುತ್ತದೆ.

**ಧನು:** ನಿಮ್ಮ ಅನಿರೀಕ್ಷಿತ ಸ್ವಭಾವ ನಿಮ್ಮ ವೈವಾಹಿಕ ಸಂಬಂಧವನ್ನು ಹಾಳು ಮಾಡಲು ಬಿಡಬೇಡಿ. ಇದನ್ನು ತಡೆಯುವುದನ್ನು ಖಚಿತಪಡಿಸಿಕೊಳ್ಳಿ, ಇಲ್ಲದಿದ್ದಲ್ಲಿ ನೀವು ನಂತರ ವಿಷಾದಪಡಬಹುದು. ನಿಮ್ಮ ಪೋಷಕರು ನೀಡಿದ ಬೆಂಬಲದಿಂದ ಹಣಕಾಸು ಸಮಸ್ಯೆಗಳು ನಿವಾರಣೆಯಾದಂತೆನಿಸುತ್ತವೆ. ಸ್ನೇಹಿತರು ಮತ್ತು ಅಪರಿಚಿತರಿಬ್ಬರ ಬಗೆಗೂ ಎಚ್ಚರದಿಂದಿರಿ.


**ಮಕರ:** ನಿಮ್ಮ ಮುಖದಲ್ಲಿ ನಿರಂತರವಾದ ನಗುವಿರುವ ಮತ್ತು ಅಪರಿಚಿತರೂ ಪರಿಚಿತರಂತೆ ತೋರುವ ಒಂದು ದಿನ. ಇಂದು ನೀವು ಒಳ್ಳೆಯ ಹಣ ಮಾಡುತ್ತೀರಿ - ಆದರೆ ವೆಚ್ಚಗಳಲ್ಲಿ ನಿಮಗೆ ಉಳಿಸಲು ಕಷ್ಟವಾಗಿಸುತ್ತದೆ. ನಿಮ್ಮ ಸಂತೋಷವನ್ನು ನಿಮ್ಮ ಪೋಷಕರ ಜೊತೆ ಹಂಚಿಕೊಳ್ಳಿ. ಒಂಟಿತನ ಮತ್ತು ಖಿನ್ನತೆಯ ಭಾವನೆ ಅಳಿಸಿಹಾಕಿ ಅವರಿಗೆ ತಾವು ಅಮೂಲ್ಯವೆಂದು ಭಾವನೆ ಬರುವ ಹಾಗೆ ಮಾಡಿ.

**ಕುಂಭ:** ಧೂಮಪಾನ ತ್ಯಜಿಸುವುದು ನೀವು ದೈಹಿಕವಾಗಿ ಆರೋಗ್ಯವಾಗಿ ಉಳಿಯಲು ಸಹಾಯ ಮಾಡುತ್ತದೆ. ರಾತ್ರಿಯ ವೇಳೆಯಲ್ಲಿ ಇಂದು ನೀವು ಹಣದ ಪ್ರಯೋಜನವನ್ನು ಪಡೆಯುವ ಪೂರ್ತಿ ಸಾಧ್ಯತೆ ಇದೆ ಏಕೆಂದರೆ ನಿಮ್ಮ ಮೂಲಕ ಕೊಟ್ಟಿರುವ ಹಣ ಇಂದು ನಿಮಗೆ ಮರಳಿ ಸಿಗಬಹುದು. ನಿಮ್ಮ ಸಕಾಲಿಕ ಸಹಾಯ ಇನ್ನೊಬ್ಬರ ಜೀವ ಉಳಿಸುತ್ತದೆ.

**ಮೀನ:** ನಿಮ್ಮ ಧೀರ್ಘಕಾಲೀನ ಅನಾರೋಗ್ಯದ ಜೊತೆ ಹೋರಾಡುವಾಗ ಆತ್ಮ ವಿಶ್ವಾಸ ಶೌರ್ಯದ ಮೂಲವೆಂದು ತಿಳಿದಿರಿ. ಇಂದು ನೀವು ಸುಲಭವಾಗಿ ಬಂಡವಾಳ ಪಡೆಯಬಹುದು ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಇಂದು ಯಾರಾದರೂ ನಿಮ್ಮ ಪ್ರೀತಿಯ ನಡುವೆ ಬರಬಹುದು.

# ಅದ್ವೈತ ಸಿದ್ಧಾಂತವನ್ನು ಜಗತ್ತಿಗೆ ಸಾರಿದ ಶಂಕರಾಚಾರ್ಯರು

**ಶಂಕರ ಬದುಕಿದ. ಅವನಿಗೆ ಎಂಟನೇ ವರ್ಷದಲ್ಲಿದ್ದ ಮೃತ್ಯುಯೋಗ ಭಗವಂತನ ಕೃಪೆಯಿಂದ ನಿವಾರಣೆಯಾಗಿತ್ತು. ನಂತರ ವೇದವ್ಯಾಸರನ್ನು ಕೇದಾರದಲ್ಲಿ ಭೇಟಿಯಾಗಿ ಬ್ರಹ್ಮಸೂತ್ರಗಳಿಗೆ ಅವರು ಬರೆದ ಭಾಷ್ಯವನ್ನು ತೋರಿಸಿ ಅವರೊಂದಿಗೆ ಚರ್ಚೆಯನ್ನು ನಡೆಸಿದಾಗ ಅವರು 16 ವರುಷಗಳ ಆಯಸ್ಸನ್ನು ಕರುಣಿಸಿ ಜಗತ್ತಿನಲ್ಲಿ ಮಿಥ್ಯಾವಾದವನ್ನು ಖಂಡಿಸಿ ಅದ್ವೈತ ಸಿದ್ಧಾಂತವನ್ನು ಆಚಂದ್ರಾರ್ಕವಾಗಿಸುವಂತೆ ಆದೇಶಿಸಿದರು.**



ಶಂಕರರ ತಂದೆ ಶಿವಗುರು, ತಾಯಿ ಆರ್ಯಾಂಬೆ, ಪರಮ ಶಿವಭಕ್ತರು. ಮದುವೆಯಾದ ಬಹಳ ವರ್ಷಗಳಾದರೂ ಮಕ್ಕಳಾಗಿರಲಿಲ್ಲ. ಒಮ್ಮೆ ಶಿವಗುರುವಿನ ಕನಸಿನಲ್ಲಿ ಭಗವಂತ ಶಿವ ಕೇಳಿದ- ನಿನಗೆ ಸನ್ನಡತೆಯುಳ್ಳ ಹಾಗೂ ಸರ್ವಜ್ಞನೆನಿಸುವ ಮಗ ಬೇಕು ಎನ್ನುವುದಾದರೆ ಅಲ್ಪಾಯುಷಿ ಮಗ ಜನಿಸುತ್ತಾನೆ.

ದೀರ್ಘಾಯುಷಿ ಮಗ ಬೇಕು ಎನ್ನುವುದಾದರೆ ಅಜ್ಞಾನಿ- ಅವಿವೇಕಿಯಾದ ಮಗ ಜನಿಸುತ್ತಾನೆ. ಇಬ್ಬರಲ್ಲಿ ಯಾರು ಬೇಕು? ಎಂದು. ಅಲ್ಪಾಯುವಾದರೂ ಪರವಾಗಿಲ್ಲ ಒಳ್ಳೆಯ ನಡತೆಯುಳ್ಳ ಪುತ್ರನನ್ನೇ ಕೊಡು ಎಂದು ಶಿವಗುರು ಪ್ರಾರ್ಥಿಸಿದಾಗ, ತಥಾಸ್ತು ಎಂದ ಪರಮೇಶ್ವರ.

ಕನಸಿನಿಂದ ಎಚ್ಚರ ವಾಯಿತು. ಅಲ್ಪಾಯುಷಿ ಮಗು ಜನಿಸುತ್ತದೆ ಎಂದು ತಿಳಿದ ತಾಯಿಗೆ ಸ್ವಲ್ಪ ಬೇಸರವಾದರೂ ಬಂಜೆ ಎಂಬ ಲೋಕಾಪವಾದದಿಂದ ದೂರವಾದೆನಲ್ಲ ಎಂದು ಸಮಾಧಾನವಾಯಿತು. ಕೆಲವೇ ತಿಂಗಳಲ್ಲಿ ಆರ್ಯಾಂಬೆ ಗರ್ಭಿಣಿಯಾಗಿ ವೈಶಾಖ ಮಾಸದ ಶುಕ್ಲ ಪಕ್ಷದ ಪಂಚಮಿ ತಿಥಿಯಲ್ಲಿ ಶಂಕರರು ಜನಿಸಿದರು.

ಈಶ್ವರನ ವರಪ್ರಸಾದದಿಂದ ಹುಟ್ಟಿದ ಮಗುವಿಗೆ ತಂದೆ ಶಂಕರನೆಂದು ನಾಮಕರಣ ಮಾಡಿದರು ವಯಸ್ಸಿಗೆ ಮೀರಿದ ಪ್ರೌಢಿಮೆ ಮಗನಲ್ಲಿ ಇದ್ದುದನ್ನು ಗಮನಿಸಿದ ತಂದೆ, ಬೇಗನೆ ಉಪನಯನ ಮಾಡಿ ಗುರುಕುಲಕ್ಕೆ ಕಳಿಸಬೇಕೆಂದು ತಯಾರಿ ಮಾಡುವುದರೊಳಗೆ ಕಾಲವಶವಾದರು. ಪತಿಯ ಇಚ್ಛೆಯನ್ನು ಪೂರೈಸಬೇಕೆಂದು ತೀರ್ಮಾನಿಸಿದ ಆರ್ಯಾಂಬೆ ಬಂಧುಗಳ ನೆರವಿನಿಂದ, ಐದನೇ ವಯಸ್ಸಿನಲ್ಲಿಯೇ ಶಂಕರನಿಗೆ ಉಪನಯನ ಮಾಡಿಸಿದರು.

ಪುಟ್ಟ ಬ್ರಹ್ಮಚಾರಿ ಶಂಕರ ವೇದ-ಶಾಸ್ತ್ರಗಳ ಅಧ್ಯಯನಕ್ಕೆ ಗುರುಕುಲದತ್ತ ಹೊರಟನು. ಶಂಕರರಿಗೆ ಎಂಟನೆಯ ವಯಸ್ಸಿನಲ್ಲಿ ಅಪಾರವಾದ ಜ್ಞಾನ ಲಭಿಸಿತ್ತು. ತಾಯಿಗೆ ಮಗನ ಪ್ರೌಢಿಮೆ ಕಂಡು ಹಿಗ್ಗು. ಆದರೆ ಅವನ ಅಲ್ಪಾಯುಷ್ಯದ ಕುರಿತು ಕೊರಗು ಕಾಡತೊಡಗಿತು. ವಿದ್ವಾಂಸರ ಬಳಿ ಮಗನ ಜಾತಕ ತೋರಿಸಿದಾಗ, ಅವರ ಮುಖದಲ್ಲಿ ಚಿಂತೆಯ ಗೆರೆ ಮೂಡಿದ್ದನ್ನು ಗಮನಿಸಿ ಆರ್ಯಾಂಬೆ ಆತಂಕಗೊಂಡಳು.

ವಿದ್ವಾಂಸರು ಇರುವ ವಿಚಾರವನ್ನು ತಿಳಿಸಿದರು, ಹೌದು ತಾಯಿ, ನಿನ್ನ ಮಗನಿಗೆ ಅವನ ಎಂಟನೆಯ ಹಾಗೂ ಹದಿನಾರನೆಯ ವಯಸ್ಸುಗಳಲ್ಲಿ ಮೃತ್ಯುಯೋಗವಿದೆ. ಇದನ್ನು ಕೇಳಿದ ತಾಯಿ ದಿಕ್ಕೇ ತೋಚದಂತಾದಳು. ಈ ವಿಚಾರಗಳೆಲ್ಲ ಅ ಹತ್ತಿರದಲ್ಲಿ ಕುಳಿತಿದ್ದ ಶಂಕರನ ಕಿವಿಗೂ ಬಿದ್ದಿತು. ಒಂದಿಷ್ಟೂ ವಿಚಲಿತನಾಗದ ಪುಟ್ಟ ಶಂಕರ ಯೋಚಿಸಿದ- ನಾನು ಅಲ್ಪಾಯು. ಈ ಕಡಿಮೆ ಅವಧಿಯಲ್ಲಿಯೇ ನನ್ನ ಕರ್ತವ್ಯಗಳನ್ನು ಮಾಡಿ ಮುಗಿಸಬೇಕು.

ತಾಯಿಯ ದುಃಖ ಅವನಿಗೆ ತಿಳಿದಿತ್ತು. ಏನಾದರೂ ಮಾಡಿ ತಾಯಿಯನ್ನು ಒಪ್ಪಿಸಬೇಕೆಂದು ಯೋಚಿಸುತ್ತಿದ್ದ. ಒಂದು ದಿನ ಶಂಕರ ತಾಯಿಯ ಮುಂದೆ ತನ್ನ ಬೇಡಿಕೆಯನ್ನು ಇಟ್ಟ. ಅಮ್ಮಾ ನಾನು ಅಲ್ಪಾಯು ಎಂದು ನಿನಗೆ ತಿಳಿದಿದೆ. ಹಾಗೆ ಸಾಯುವ ಬದಲು ಸನ್ಯಾಸಿಯಾಗಿ ಸತ್ತರೆ ಮೋಕ್ಷ ದೊರೆಯುತ್ತದೆ. ಅದಕ್ಕೆ ಸನ್ಯಾಸಿಯಾಗಲು ಅನುಮತಿ ಕೊಡಮ್ಮ ಎಂದು ಕೇಳಿದ. ಈ ಮಾತನ್ನು ಕೇಳಿ ತಾಯಿ ಹೃದಯವೇ ಬಾಯಿಗೆ ಬಂದಿತು, ಅಳುತ್ತಾ ಅವನ ಮಾತಿಗೆ ಅವಳು ಸಮ್ಮತಿಸಲಿಲ್ಲ.

ಒಂದು ದಿನ ಆರ್ಯಾಂಬೆ ಸ್ನಾನ ಮಾಡಲು ಮಗನೊಡನೆ ಪೂರ್ಣಾ ನದಿಗೆ ಹೋದಳು. ಇನ್ನೂ ಶಂಕರನ ಸ್ನಾನ ಮುಗಿದಿರಲಿಲ್ಲ, ನೀರಿನ ಮುಳುಗು ಹಾಕುತ್ತಿದ್ದ. ಇದ್ದಕ್ಕಿದ್ದಂತೆ ಒಂದು ಮೊಸಳೆ ಶಂಕರನ ಸಮೀಪವೆ ಬಂದು ಅವನ ಕಾಲನ್ನು ಹಿಡಿದು ನದಿಯೊಳಗೆ ಎಳೆಯತೊಡಗಿತು.

ಶಂಕರ ಜೀವ ಉಳಿಸಿಕೊಳ್ಳಲು ತುಂಬಾ ಪ್ರಯತ್ನ ಪಡುತ್ತಿದ್ದ, ಆದರೆ ಮೊಸಳೆ ಯನ್ನು ಎದುರಿಸಲು ಚಿಕ್ಕ ಬಾಲಕ ನಿಂದ ಆಗಲಿಲ್ಲ. ತನಗೆ ಇನ್ನು ದುರ್ಮರಣ ಒದಗಿತು ಎಂದು ಶಂಕರನಿಗೆ ತಿಳಿಯಿತು. ದಡದಲ್ಲಿದ್ದ ತಾಯಿ ಕಡೆ ತಿರುಗಿ- ಅಮ್ಮಾ, ನನಗೀಗ ದುರ್ಮರಣ ಒದಗಿದೆ, ಮೊಸಳೆ ನನ್ನನ್ನು ಬಿಡುವುದಿಲ್ಲ, ಈಗಲಾದರೂ ಸನ್ಯಾಸಿ ಆಗಲು ಅನುಮತಿ ಕೊಡಮ್ಮ. ಸಂಕಲ್ಪ ಮಾತ್ರದಿಂದಲೇ ಸನ್ಯಾಸ ಸ್ವೀಕರಿಸಿ ಸತ್ತು ಮೋಕ್ಷ ಪಡೆಯುತ್ತೇನೆ ಎಂದು ಅಂಗಲಾಚಿದನು. ಮಗ ಇನ್ನು ಬದುಕುವುದಿಲ್ಲವೆಂದು ಆರ್ಯಾಂಬೆಗೆ ದೃಢವಾಯಿತು.

ಅವನ ಕೊನೆಯಾಸೆಯನ್ನು ನೆರವೇರಿಸಲೆಂದು ಯೋಚಿಸಿ ಸನ್ಯಾಸ ಸ್ವೀಕರಿಸಲು ಅಳುತ್ತಲೇ ಒಪ್ಪಿಗೆ ಕೊಟ್ಟಳು. ಆ ಕ್ಷಣವೇ ಶಂಕರನು ಸಂಕಲ್ಪ ಮಾತ್ರದಿಂದ ಸನ್ಯಾಸ ಸ್ವೀಕರಿಸಿದನು. ಸ್ವೀಕರಿಸಿದ ಕ್ಷಣ ಮಾತ್ರದಲ್ಲೇ ಸುತ್ತಮುತ್ತ ಇದ್ದ ಬೆಸ್ತರು ಓಡಿ ಬಂದು ಗಲಾಟೆ ಮಾಡಿದರು.

ಗಾಬರಿಗೊಂಡ ಮೊಸಳೆ ಶಂಕರನ ಕಾಲುಗಳನ್ನು ಬಿಟ್ಟುಹೋಯಿತು. ಶಂಕರ ಬದುಕಿದ. ಅವನಿಗೆ ಎಂಟನೇ ವರ್ಷದಲ್ಲಿದ್ದ ಮೃತ್ಯುಯೋಗ ಭಗವಂತನ ಕೃಪೆಯಿಂದ ನಿವಾರಣೆಯಾಗಿತ್ತು. ನಂತರ ವೇದವ್ಯಾಸರನ್ನು ಕೇದಾರದಲ್ಲಿ ಭೇಟಿಯಾಗಿ ಬ್ರಹ್ಮಸೂತ್ರಗಳಿಗೆ ಅವರು ಬರೆದ ಭಾಷ್ಯವನ್ನು ತೋರಿಸಿ ಅವರೊಂದಿಗೆ ಚರ್ಚೆಯನ್ನು ನಡೆಸಿದಾಗ ಅವರು 16 ವರುಷಗಳ ಆಯಸ್ಸನ್ನು ಕರುಣಿಸಿ ಜಗತ್ತಿನಲ್ಲಿ ಮಿಥ್ಯಾವಾದವನ್ನು ಖಂಡಿಸಿ ಅದ್ವೈತ ಸಿದ್ಧಾಂತವನ್ನು ಆಚಂದ್ರಾರ್ಕವಾಗಿಸುವಂತೆ ಆದೇಶಿಸಿದರು.

ಆ ಕೆಲಸವನ್ನು ಪೂರ್ಣಗೊಳಿಸಿ ಅನೇಕಾನೇಕ ದೇವಾಲಯಗಳನ್ನು ಪುನರುದ್ದಾರಗೊಳಿಸಿ ಅಲ್ಲೇ ಶ್ರೀಚಕ್ರ ಸ್ಥಾಪಿಸಿ, ಬದರಿ, ಪುರಿ, ದ್ವಾರಕೆ ಹಾಗೂ ಶೃಂಗೇರಿಗಳಲ್ಲಿ ಪೀಠಗಳನ್ನು ಸ್ಥಾಪಿಸಿದ ಶಂಕರರು ತಮ್ಮ ಮೊದಲ ನಾಲ್ವರು ಶಿಷ್ಯರನ್ನು ನಾಲ್ಕೂ ಪೀಠಗಳಿಗೆ ಪ್ರಥಮ ಅಧಿಪತಿಗಳನ್ನಾಗಿ ನೇಮಿಸಿದರು.

32ನೇ ವಯಸ್ಸಿನಲ್ಲಿ ಕಾಶ್ಮೀರದ ಸರ್ವಜ್ಞ ಪೀಠಾರೋಹಣ ಮಾಡಿ ಕೇದಾರದಿಂದ ಮೇಲೆ ಹಿಮಾಲಯದೆಡೆಗೇರಿ ಸಜೀವ ಸಮಾಧಿ ಪಡೆದರು.

- **ರೂಪಾ** ಗುರುರಾಜ್



# ತುಂಟತನದ ಹಿಂದಿನ ದೊಡ್ಡ ಮನಸ್ಸು

**» ಹನುಮಂತನ ಗಾಯನ ಎಷ್ಟು ಶಕ್ತಿಯುತವಾಗಿತ್ತೆಂದರೆ, ಸುತ್ತಲಿನ ಪ್ರಕೃತಿಯೇ ಆನಂದದಿಂದ ಕರಗಿತು. ಅಲ್ಲಿದ್ದ ಪ್ರತಿಯೊಂದು ಕಲ್ಲೂ ಕರಗಿ ನೀರಾಗತೊಡಗಿತು. ಮರಗಳೆಲ್ಲವೂ ಪುಷ್ಪವೃಷ್ಟಿ ಮಾಡಿದವು. ಪ್ರಾಣಿಪಕ್ಷಿಗಳು ಸುತ್ತಲೂ ಕುಳಿತು ಕಣ್ಣುಮುಚ್ಚಿ ಆನಂದದಿಂದ ಆಲಿಸತೊಡಗಿದವು. ಹನುಮಂತನು ಇದಾವುದೂ ತಿಳಿಯದೇ ತನ್ನ ಪಾಡಿಗೆ ತಾನು ಹಾಡುತ್ತಿದ್ದನು.**

ಸಕಲವಿದ್ಯಾ ಪಾರಂಗತನಾದ ರಾಮಭಕ್ತ ಹನುಮಂತನು ಸಂಗೀತದಲ್ಲೂ ಪರಿಣತನೆಂದು ಹೇಳಲಾಗಿದೆ. ಸಂಗೀತಕ್ಕೆ ಸಂಬಂಧಿಸಿದಂತೆ ಹನುಮಂತನ ಸಾಕಷ್ಟು ದಂತಕಥೆಗಳಿವೆ. ಅದರ ಪೈಕಿ ಒಂದು ಹೀಗಿದೆ: ಒಮ್ಮೆ, ತನ್ನ ಆಶ್ರಮದಲ್ಲಿದ್ದ ಹನುಮಂತನಿಗೆ ಹತ್ತಿರದ ವೀಣಾವಾದನವಾದ ಸದ್ದು ಕೇಳಿಸಿತು. ಆ ನಾದಮಾಧುರ್ಯಕ್ಕೆ ಮನಸೋತ ಅವನು, ಸಂಗೀತದಲ್ಲಿ ಆಸಕ್ತಿ ತಾಳಿ, ಸಂಗೀತದ ಎಲ್ಲಾ ಪ್ರಕಾರಗಳನ್ನೂ ಕಲಿಯಬೇಕೆಂದು ಮನಸ್ಸು ಮಾಡಿದ.

ಹಾಗಾಗಿ, ಆ ವೀಣಾವಾದನ ಬರುತ್ತಿದ್ದ ದಿಕ್ಕಿಗೆ ಓಡಿದ! ಅಲ್ಲಿ ನೋಡಿದರೆ, ದೇವರ್ಷಿ ನಾರದರು ಭಕ್ತಿಯಲ್ಲಿ ಮೈಮರೆತು ವೀಣಾವಾದನ ಮಾಡುತ್ತಿದ್ದರು. ಕೂಡಲೇ ಹನುಮಂತನು ಅವರ ಪಾದಗಳನ್ನು ಹಿಡಿದು, ನನಗೆ ದಯವಿಟ್ಟು ಸಂಗೀತ ಕಲಿಸಿ.

ನೀವು ಒಪ್ಪುವವರೆಗೂ ನಿಮ್ಮ ಪಾದ ಬಿಡುವುದಿಲ್ಲ ಎಂದು ಬೇಡಿಕೊಂಡನು. ನಾರದರು ಕೂಡಲೇ ಒಪ್ಪಿಕೊಂಡರು. ನಾರದರಿಂದ ಸಂಗೀತ ಪಾಠ ಹೇಳಿಸಿಕೊಳ್ಳತೊಡಗಿದ ಹನುಮಂತ, ಕೆಲವೇ ದಿನಗಳಲ್ಲಿ ಸಂಗೀತದ ಸಕಲಾಂಶಗಳಲ್ಲೂ ಪರಿಣತನಾದ. ಎಲ್ಲಾ ರಾಗಗಳನ್ನೂ ಸಿದ್ಧಿಸಿಕೊಂಡ. ಎಲ್ಲಾ ವಾದ್ಯಗಳನ್ನೂ ನುಡಿಸಬಲ್ಲವನಾದ. ಹೀಗೆ ಚೆನ್ನಾಗಿ ಸಂಗೀತ ಕಲಿತ ಹನುಮಂತನನ್ನು ನಾರದರು ಪರೀಕ್ಷಿಸಬಯಸಿದರು. ಅದಕ್ಕಾಗಿ ಅವನಿಗೆ ಕಷ್ಟಕರವಾದ ಒಂದು ರಾಗವನ್ನು ಹಾಡಲು ಹೇಳಿದರು. ಹನುಮಂತನು ಪದ್ಮಾಸನದಲ್ಲಿ ಕುಳಿತು ಸುಶ್ರಾವ್ಯವಾಗಿ ಹಾಡತೊಡಗಿದ. ಅವನ ಹಾಡು ಅದೆಷ್ಟು ಸೊಗಸಾಗಿ, ದಿವ್ಯವಾಗಿತ್ತೆಂದರೆ, ಅದನ್ನು ಕೇಳುತ್ತಾ ನಾರದರು ಮೈಮರೆತು ನಿಶ್ಚಲರಾಗಿಬಿಟ್ಟರು. ಅವರ ದಿವ್ಯದೇಹದ ಒಂದೊಂದು ಅಂಗವೂ ರೋಮಾಂಚನಗೊಂಡಿತು.

ಕಂಗಳು ಆನಂದದಿಂದ ಮುಚ್ಚಿಕೊಂಡವು. ಸಂತೋಷದಿಂದ ಅವರು ತಲೆದೂಗತೊಡಗಿದರು. ಕ್ರಮೇಣ, ವೀಣೆಯನ್ನು ಹಿಡಿದಿದ್ದ ಅವರ ಕೈಬಿಗಿ ಸಡಿಲಗೊಂಡು, ವೀಣೆಯು ಅವರ ಕೈಯಿಂದ ಜಾರಿಹೋಯಿತು. ಆದರೆ ಅವರಿಗೆ ಅದು ತಿಳಿಯಲೇ ಇಲ್ಲ!

ಹನುಮಂತನ ಗಾಯನ ಎಷ್ಟು ಶಕ್ತಿಯುತವಾಗಿತ್ತೆಂದರೆ, ಸುತ್ತಲಿನ ಪ್ರಕೃತಿಯೇ ಆನಂದದಿಂದ ಕರಗಿತು. ಅಲ್ಲಿದ್ದ ಪ್ರತಿಯೊಂದು ಕಲ್ಲೂ ಕರಗಿ ನೀರಾಗತೊಡಗಿತು. ಮರಗಳೆಲ್ಲವೂ ಪುಷ್ಪವೃಷ್ಟಿ ಮಾಡಿದವು. ಪ್ರಾಣಿಪಕ್ಷಿಗಳು ಸುತ್ತಲೂ ಕುಳಿತು ಕಣ್ಣುಮುಚ್ಚಿ ಆನಂದದಿಂದ ಆಲಿಸತೊಡಗಿದವು. ಹನುಮಂತನು ಇದಾವುದೂ ತಿಳಿಯದೇ ತನ್ನ ಪಾಡಿಗೆ ತಾನು ಹಾಡುತ್ತಿದ್ದನು.

ಹೀಗೆ ಸ್ವಲ್ಪ ಹೊತ್ತು ಹಾಡಿ, ಅಂತೂ ತನ್ನ ಹಾಡನ್ನು ಮುಗಿಸಿದನು ಹನುಮಂತ. ಆಗ ಸುತ್ತಲಿನ ಪ್ರಕೃತಿ ಪುನಃ ಸಹಜ ಸ್ಥಿತಿಗೆ ಬಂದಿತು. ಪ್ರಾಣಿಪಕ್ಷಿಗಳೆಲ್ಲವೂ ತಮ್ಮ ಪಾಡಿಗೆ ತಾವು ಹೊರಟು ಹೋದವು. ಕರಗಿದ್ದ ಕಲ್ಲುಗಳೆಲ್ಲವೂ ಪುನಃ ಗಟ್ಟಿಯಾದವು. ಆಗ ನಾರದರು ಕಣ್ತೆರೆದು ಮಂದಹಾಸ ಬೀರುತ್ತಾ ತಮ್ಮ ವೀಣೆಯನ್ನು ತೆಗೆದುಕೊಳ್ಳಲು ಕೈಚಾಚಿದರು. ಆದರೆ ಅವರ ವೀಣೆ, ಪಕ್ಕದ ಬಂಡೆಯಲ್ಲಿ ಸಿಕ್ಕಿಕೊಂಡುಬಿಟ್ಟಿತ್ತು.

ಹನುಮಂತನು ಹಾಡಿದಾಗ, ನಾರದರ ಕೈಯಿಂದ ವೀಣೆಯು ಜಾರಿ ಆ ಬಂಡೆಯ ಮೇಲೆ ಬಿದ್ದು, ಆ ಬಂಡೆಯು ಕರಗಿ ಪುನಃ ಗಟ್ಟಿಯಾದಾಗ, ವೀಣೆಯು ಅದರಲ್ಲಿ ಸಿಕ್ಕಿಕೊಂಡುಬಿಟ್ಟಿತ್ತು. ನಾರದರು ಎಷ್ಟು ಪ್ರಯತ್ನಿಸಿದರೂ ಆ ವೀಣೆಯನ್ನು ಬಿಡಿಸಿಕೊಳ್ಳಲಾಗಲಿಲ್ಲ. ಅವರು ಬೆವರುತ್ತಾ, ತಾವೇ ಹಾಡಿದರು. ಆದರೆ ಹನುಮಂತನಂತೆ ಕಲ್ಲನ್ನು ಕರಗಿಸುವಂತೆ ಹಾಡಲಾಗಲಿಲ್ಲ.

ಕೊನೆಗೆ ಅವರು ಹನುಮಂತನನ್ನು ಪುನಃ ಹಾಡಲು ಕೇಳಿಕೊಂಡರು. ಆದರೆ ಹನುಮಂತನು ತುಂಟನಗೆ ಬೀರುತ್ತಾ ಹಿಂದೇಟು ಹಾಕಿದನು. ನಾರದರು ಅವನ ಹಿಂದೆ ಹೋಗಲು, ಅವನು ವೇಗವಾಗಿ ನಡೆಯತೊಡಗಿದನು. ನಾರದರೂ ಬೇಗಬೇಗನೆ ಅವನ ಹಿಂದೆ ನಡೆಯುತ್ತಾ ಹೋದರು. ಹನುಮಂತನು ಈಗ ವೇಗವಾಗಿ ಓಡತೊಡಗಿದನು. ನಾರದರೂ ಅವನ ಹಿಂದೆ ಓಡಿದರು.

ಹನುಮಂತನು ಸುತ್ತಲಿನ ಬೆಟ್ಟ, ಗುಡ್ಡ, ಕಾಡುಗಳ ಓಡಿದನು. ನಾರದರೂ ಅವನ ಹಿಂದೆ ಓಡಿದರು. ಹೀಗೆ ಬಹಳ ಹೊತ್ತು ಕಾಡಿಸಿ ಹನುಮಂತನು ಕೊನೆಗೆ ತನ್ನ ಮೊದಲಿನ ಸ್ಥಳದಲ್ಲಿ ಕುಳಿತನು. ನಾರದರು ಬಸವಳಿಯುತ್ತಾ ಬಂದು, ಯಾಕಪ್ಪಾ ಹೀಗೆ ಮಾಡಿದೆ? ಎಂದು ಕೇಳಿದರು.

ಅದಕ್ಕೆ ಹನುಮಂತನು ವಿನಯದಿಂದ ಕೈಮುಗಿಯುತ್ತಾ, ಗುರುಗಳೇ, ನೀವು ನನ್ನ ಪ್ರಭುವಿನ ಮಹಾಭಕ್ತರು. ಜತೆಗೆ ನನ್ನ ಗುರುಗಳು. ಆದ್ದರಿಂದ, ನಿಮ್ಮ ಪಾದಧೂಳಿ ಈ ಸ್ಥಳದ ಬಿದ್ದು, ಈ ಸ್ಥಳವೇ ಪಾವನವಾಗಲಿ ಎಂದು ಹೀಗೆ ಮಾಡಿದೆ. ದಯವಿಟ್ಟು ನನ್ನನ್ನು ಕ್ಷಮಿಸಿ ಎಂದು ಹೇಳಿ ಹಾಡತೊಡಗಿದನು. ಆಗ ಕಲ್ಲುಗಳು ಪುನಃ ಕರಗಿ ನೀರಾಗಲು, ನಾರದರ ವೀಣೆಯು ಬಿಡುಗಡೆಯಾಗಿ ಅವರು ಅದನ್ನು ಎತ್ತಿಕೊಂಡರು.

ಅನಂತರ ಅವರು, ನಿನ್ನ ಸಂಗೀತ ನಿನ್ನ ಒಡೆಯನನ್ನು ಸದಾ ಮೆಚ್ಚಿಸಲಿ ಎಂದು ಹನುಮಂತನನ್ನು ಆಶೀರ್ವದಿಸಿ ಹೊರಟರು. ಹನುಮಂತನ ದೈವಭಕ್ತಿ, ಗುರುಭಕ್ತಿ, ಗಾಯನಪ್ರತಿಭೆಗಳು ಅವರನ್ನು ಮೂಕವಿಸ್ಮಿತವಾಗಿಸಿದ್ದವು. ಹನುಮಂತನ ತುಂಟತನದ ಹಿಂದೆ ಇಂಥ ದೊಡ್ಡ ಮನಸ್ಸಿದೆ ಎಂದು ಅರಿತು ಅವರು ತಲೆದೂಗಿದರು!



- **ಡಾ.ಬಿ.ಆರ್.ಸುಹಾಸ್**, ಬೆಂಗಳೂರು

# ಬೇಲೂರಿನಲ್ಲಿ ಬಸ್ ಸಮಸ್ಯೆ: ವಿದ್ಯಾರ್ಥಿಗಳ ಆಕ್ರೋಶ

• ಪ್ರಜೋದಯ ವರದಿ

**ಬೇಲೂರು:** ಸಾರಿಗೆ ಬಸ್‌ಗಳು ಸಮಯಕ್ಕೆ ಸರಿಯಾಗಿ ಬಾರದ ಕಾರಣ ವಿದ್ಯಾರ್ಥಿಗಳಿಗೆ ಶಾಲಾ-ಕಾಲೇಜುಗಳಿಗೆ ತೆರಳಲು ತೀವ್ರ ತೊಂದರೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ವಿದ್ಯಾರ್ಥಿಗಳು ಬಸ್‌ಗಳನ್ನು ತಡೆದು ಪ್ರತಿಭಟನೆ ನಡೆಸಿ ಘೋಷಣೆಗಳನ್ನು ಕೂಗಿದರು.

ಪಟ್ಟಣದಲ್ಲಿ ಬಸ್ ಡಿಪೋ ಇದ್ದರೂ ಸಹ ಸಮಯಕ್ಕೆ ಸರಿಯಾಗಿ ಬಸ್‌ಗಳಿಲ್ಲ. ಇನ್ನು ಪ್ರತಿನಿತ್ಯ ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಿಗೆ ಉನ್ನತ ವ್ಯಾಸಾಂಗ ಮಾಡಲು ಸುಮಾರು 200 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರಯಾಣಿಸುತ್ತಿದ್ದು, ಬೆಳಗಿನ ಸಮಯ 7 ರಿಂದ 8 ಗಂಟೆ ಸಮಯದವರೆಗೆ ಸರಿಯಾದ ಬಸ್ ವ್ಯವಸ್ಥೆ ಇಲ್ಲದೆ ವಿದ್ಯಾರ್ಥಿಗಳು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ವಿಭಾಗೀಯ ಅಧಿಕಾರಿಗಳನ್ನು ವಿಚಾರಿಸಲು ಹೋದರೆ ನಮಗೆ ಬಸ್ ಕೊರತೆ ಇದೆ, ನಿಮಗೆ ಬೇಕಾದ ಸಮಯದಲ್ಲಿ ಬಸ್‌ಗಳನ್ನು ನೀಡಲು ಅವಕಾಶ ಇಲ್ಲ ಎಂದು ಉಡಾಫೆಯಿಂದ ವರ್ತಿಸುವುದರ ಜೊತೆಗೆ ಕೆಲ ಬಸ್‌ಗಳಲ್ಲಿ ಬಸ್ ಪಾಸ್ ಇರುವ ವಿದ್ಯಾರ್ಥಿಗಳನ್ನು ಕೆಳಗೆ ಇಳಿಸಿರುವ ಹಲವಾರು ಉದಾಹರಣೆಗಳಿವೆ. ನಮಗಾಗುತ್ತಿರುವ ತೊಂದರೆಗಳನ್ನು ಕೇಳುವವರು ಯಾರೂ ಇಲ್ಲದಂತಾಗಿದೆ. ಇದು ಒಂದು ದಿನದ ಗೋಳಲ್ಲ, ಪ್ರತಿನಿತ್ಯದ ಗೋಳಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಶುಕ್ರವಾರ ಬೆಳಿಗ್ಗೆ ಎಲ್ಲಾ ವಿದ್ಯಾರ್ಥಿಗಳಿಗೆ ಪರೀಕ್ಷೆ ಇದ್ದುದರಿಂದ ಹಾಸನ ಮತ್ತು ಚಿಕ್ಕಮಗಳೂರು ತೆರಳುವ ವಿದ್ಯಾರ್ಥಿಗಳಿಗೆ ಮುಂದಿನ ಭವಿಷ್ಯ ಏನು ಮೂರ್ನಾಲ್ಕು ಬಾರಿ ಡಿಪೂಗೆ ಹೋಗಿ ಅರ್ಜಿ ಸಲ್ಲಿಸಿ ಮನವಿ ಮಾಡಿದರೂ ಅಧಿಕಾರಿಗಳು ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಕೆಎಸ್ ಆರ್ ಟಿಸಿ ಅಧಿಕಾರಿಗಳ ವಿರುದ್ಧ ಧಿಕ್ಕಾರ ಕೂಗಿ ದಿಢೀರ್ ಪ್ರತಿಭಟನೆ ನಟೆಸಿದರು.

ಇಷ್ಟೆಲ್ಲಾ ತೊಂದರೆಯಾದರೂ ಕೆಎಸ್ ಆರ್ ಟಿಸಿ ಡಿಪೊ ಮ್ಯಾನೇಜರ್ ಆಗಲಿ ಅಥವಾ ಟಿ.ಸಿ.ಗಳಾಗಲಿ ವಿದ್ಯಾರ್ಥಿಗಳ ಗೋಳನ್ನು ಆಲಿಸಲು ಬರದ ಹಿನ್ನಲೆಯಲ್ಲಿ ಸಾರ್ವಜನಿಕರು ಸಹ ಕೈ ಜೋಡಿಸಿ ಪ್ರತಿಭಟನೆ ನಡೆಸಿದರು.

ಇದೇ ವೇಳೆ ವಿದ್ಯಾರ್ಥಿಗಳಾದ ಹೇಮಂತ್, ವೇದಮೂರ್ತಿ, ವಿಕಾಸ್ ಆಕಾಶ್, ಸೃಷ್ಟಿ, ಯಶವಂತ್, ಶರತ್, ರಾಘು, ಆರೀಫ, ಡಾ. ರಾಜ್ ಕುಮಾರ್ ಸಂಘದ ಅಧ್ಯಕ್ಷ ತೀರ್ಥಂಕರ್ ಸಾಮಾಜಿಕ ಹೋರಾಟಗಾರರಾದ ಸೋಮಶೇಖರ್, ವೆಂಕಟೇಶ್ ಇನ್ನಿತರರು ಹಾಜರಿದ್ದರು.




## ಅಧಿಕಾರಿಗಳಿಗೆ ಶಾಸಕ ಹೆಚ್.ಕೆ.ಸುರೇಶ್ ತರಾಟೆ

ಬೆಂಗಳೂರಿನಲ್ಲಿದ್ದ ಶಾಸಕರಿಗೆ ವಿಷಯ ತಿಳಿದು ದೂರವಾಣಿ ಮೂಲಕ ಪರಿಸ್ಥಿತಿ ಬಗ್ಗೆ ಅಧಿಕಾರಿಗಳಿಗೆ ತರಾಟೆಗೆ ತೆಗೆದುಕೊಂಡು, ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ತೊಂದರೆಯಾಗದಂತೆ ಕೂಡಲೇ ಬಸ್‌ಗಳ ವ್ಯವಸ್ಥೆ ಆಗಬೇಕು. ಪ್ರತಿನಿತ್ಯ ಎರಡು ಜಿಲ್ಲೆಗಳಿಗೆ 7 ರಿಂದ 8 ಗಂಟೆಯವರೆಗೆ ಬಸ್ ವ್ಯವಸ್ಥೆ ಕಲ್ಪಿಸಬೇಕು. ಇಲ್ಲದಿದ್ದರೆ ನಿಮ್ಮ ವಿರುದ್ಧ ಸಾರಿಗೆ ಸಚಿವರಿಗೆ ದೂರು ಸಲ್ಲಿಸುವುದಾಗಿ ಎಚ್ಚರಿಕೆ ನೀಡಿದ ಬೆನ್ನಲ್ಲೇ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಎರಡು ಬಸ್‌ಗಳನ್ನು ಕಲ್ಪಿಸಿದರು.

# ನಿರಂತರ ಮಳೆ: ಕುಸಿದು ಬಿದ್ದ ಶಾಲಾ ಕಟ್ಟಡ

• ಪ್ರಜೋದಯ ವರದಿ

**ಹಳೇಬೀಡು:** ನಿರಂತರವಾಗಿ ಮಳೆ ಸುರಿಯುತ್ತಿರುವುದರಿಂದ ಜಿ.ಸಾಣೇನಹಳ್ಳಿ ಗ್ರಾಮದಲ್ಲಿ ಸರ್ಕಾರಿ ಶಾಲೆಯ ಹಳೆಯ ಕಟ್ಟಡದ ಗೋಡೆ ಹಾಗೂ ಚಾವಣಿ ಕುಸಿದು ಬಿದ್ದಿದೆ.

ಕಟ್ಟಡದಲ್ಲಿ 30ಕ್ಕೂ ಹೆಚ್ಚು ವರ್ಷ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ ನಡೆಸಲಾಗುತ್ತಿತ್ತು. ಶಾಲೆಯನ್ನು ಬೇರೆ ಕಡೆಗೆ ಸ್ಥಳಾಂತರಿಸಿದ ನಂತರ ಕಟ್ಟಡವನ್ನು ಗ್ರಾಮದ ಕೆಲಸಗಳಿಗೆ ಬಳಕೆ ಮಾಡಿಕೊಳ್ಳಲಾಗಿತ್ತು. ಈಗ ಕಟ್ಟಡದಲ್ಲಿ ಸರ್ಕಾರಿ ಸಭೆಗಳನ್ನು ನಡೆಸಲಾಗುತ್ತಿತ್ತು. ಊರಿನ ಸಭೆ ಸಮಾರಂಭಗಳಿಗೂ ಕಟ್ಟಡ ಬಳಕೆಯಾಗುತ್ತಿತ್ತು. ಕಟ್ಟಡ ಕುಸಿದು ಬಿದ್ದಿರುವುದರಿಂದ ಗ್ರಾಮದ ಸಭೆ, ಸಮಾರಂಭಗಳಿಗೆ ತೊಡಕಾಗಿದೆ ಎಂದು ಗ್ರಾಮಸ್ಥ ಹೇಮಂತ್ ತಿಳಿಸಿದರು.

ಗ್ರಾಮಕ್ಕೆ ಹಾಲಿನ ಡೇರಿ ಮಂಜೂರಾದಾಗ ಸೂಕ್ತ ಕಟ್ಟಡದ ಕೊರತೆ ಆಯಿತು. ಗ್ರಾಮದವರೆಲ್ಲ ಒಗ್ಗೂಡಿ ಊರಿಗೆ ಮಂಜೂರಾದ ಡೇರಿಯನ್ನು ಉಳಿಸಿಕೊಳ್ಳೋಣ ಶಾಲೆಯ ಹಳೆಯ ಕಟ್ಟಡದಲ್ಲಿಯೇ ಡೇರಿ ನಡೆಸಲು ತೀರ್ಮಾನ ಕೈಗೊಂಡರು. ಡೇರಿ ಕಟ್ಟಡ ನಿರ್ಮಾಣ ಆಗುವವರೆಗೆ ಸುಮಾರು 25 ವರ್ಷ ಕಟ್ಟಡದಲ್ಲಿ ಡೇರಿ ನಡೆದಿದೆ. ಶಾಲೆಯ ಕಟ್ಟಡದಲ್ಲಿ ಆರಂಭವಾದ ಡೇರಿ ಜಿಲ್ಲೆಯ ಉತ್ತಮ ಡೇರಿಗಳಲ್ಲೊಂದಾಗಿದೆ ಎಂದು ಗ್ರಾಮ ಪಂಚಾಯಿತಿ ಸದಸ್ಯ ಬಾಲಚಂದ್ರ ತಿಳಿಸಿದರು.



ಈ ಕಟ್ಟಡದಲ್ಲಿ ಶಾಲೆ ಇದ್ದಾಗ ಕಲಿತವವರಲ್ಲಿ ಸಾಕಷ್ಟು ಮಂದಿ ಉನ್ನತ ಸ್ಥಾನದಲ್ಲಿದ್ದಾರೆ. ಸರ್ಕಾರಿ ಉದ್ಯೋಗ ಹೊಂದಿದವರಲ್ಲಿ ಕೆಲವರು ನಿವೃತ್ತ ಜೀವನ ಸಾಗಿಸುತ್ತಿದ್ದಾರೆ. ಶತಮಾನದ ಹಂಚಿನಲ್ಲಿರುವ ಪರಂಪರೆ ಕಟ್ಟಡವನ್ನು ದುರಸ್ತಿ ಮಾಡಿ ಉಳಿಸಿಕೊಳ್ಳಬೇಕಾಗಿದೆ ಎಂದು ರೈತ ಎಸ್.ಎನ್.ಯೋಗೀಶಪ್ಪ ಹೇಳಿದರು.

ಕಟ್ಟಡ ಒಂದಲ್ಲ ಒಂದು ಗ್ರಾಮದ ಕೆಲಸಕ್ಕೆ ಉಪಯೋಗವಾಗಿತ್ತು. ಕಟ್ಟಡದಲ್ಲಿ ನಡೆಸಿದ ಊರಿನ ಸಭೆಯಲ್ಲಿ ಸಾಕಷ್ಟು ಸಮಸ್ಯೆಗಳಿಗೆ ಇತ್ಯರ್ಥ ಕಂಡು ಕೊಂಡಿದ್ದೇವು ಎಂದು ಗ್ರಾಮಸ್ಥರು ಹಳೆಯ ನೆನಪುಗಳನ್ನು ಬಿಚ್ಚಿಟ್ಟರು.

ಕಟ್ಟಡದ ಸ್ಥಿತಿಗತಿ ಕುರಿತು ಗ್ರಾಮ ಪಂಚಾಯಿತಿಯಲ್ಲಿ ಮಾತನಾಡಿದ್ದೇನೆ. ಕಟ್ಟಡ ದುರಸ್ತಿಗೆ ಪ್ರಕೃತಿ ವಿಕೋಪ ನಿಧಿಯಿಂದ ಹಣ ಮಂಜೂರು ಮಾಡಿಸಿಕೊಂಡುವಂತೆ, ಶಾಸಕರೊಂದಿಗೆ ಮಾತನಾಡುತ್ತೇವೆ ಎಂದು ಬಾಲಚಂದ್ರ ತಿಳಿಸಿದರು.

## ದಾಖಲೆ ಬರೆದ ಹಾಸನಾಂಬ ಆದಾಯ

» ಮೊದಲನೇ ಪುಟದಿಂದ

ಹೆಚ್ಚು ಪತ್ತೆಯಾಗಿವೆ. ಪುಟಗಟ್ಟಲೆ ಪತ್ರಗಳನ್ನು ಬರೆದಿರುವ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದ್ದಾರೆ. ಹಣದ ರಾಶಿಯಿಂದ ಈ ಬೇಡಿಕೆ ಪತ್ರಗಳನ್ನು ಬೇರ್ಪಡಿಸಿ ಪ್ರತ್ಯೇಕವಾಗಿ ಸಂಗ್ರಹಿಸಲಾಗಿದೆ. ಗೌಪ್ಯತೆ ಕಾಪಾ ಡುವ ಉದ್ದೇಶದಿಂದ ಪತ್ರಗಳಲ್ಲಿರುವ ವಿಷಯವನ್ನು ಬಹಿರಂಗಪಡಿಸದಿರಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಪತ್ರ ಗಳ ರಾಶಿಯನ್ನು ಪ್ರತ್ಯೇಕ ಹುಂಡಿ ಯಲ್ಲಿ ತುಂಬಿ ಸುರಕ್ಷಿತವಾಗಿ ಇಡಲಾ ಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅ.9 ರಿಂದ 23ರವರೆಗೆ ಜರುಗಿದ ಜಾತ್ರಾ ಮಹೋತ್ಸವದಲ್ಲಿ ಒಟ್ಟು 26. 13 ಲಕ್ಷಕ್ಕೂ ಹೆಚ್ಚಿನ ಭಕ್ತರು ದೇವಿಯ ದರ್ಶನ ಪಡೆದುಕೊಳ್ಳುವ ಮೂಲಕ ಐತಿ ಹಾಸಿಕ ದಾಖಲೆ ಬರೆಯಲಾಗಿದೆ. ಅದರ ಜೊತೆಗೆ ಆದಾಯ ಗಳಿಕೆಯಲ್ಲೂ ದಾಖಲೆ ನಿರ್ಮಾಣ ಮಾಡ ಲಾಗಿದೆ. ಕಳೆದ ವರ್ಷ ದೇವಿ ದರ್ಶನ ವನ್ನು 17,42,240 ಮಂದಿ ಭಕ್ತರು ಪಡೆದಿದ್ದರು. ಒಟ್ಟಾರೆ ಕಾಣಿಕೆ ರೂಪದ ಆದಾಯ 12,63, 83,808 ರೂ.ಸಂಗ್ರ ಹವಾಗಿತ್ತು. ಇದು ಹಾಸನಾಂಬೆ ದೇವಿ ಜಾತ್ರಾ ಮಹೋತ್ಸವದ ಇತಿಹಾಸದಲ್ಲೇ ದಾಖಲೆಯಾಗಿತ್ತು. ಆದರೆ, 2025 ರಲ್ಲಿ ಆ ದಾಖಲೆ ಅಳಿಸಿ ಹೊಸ ದಾಖಲೆ ಬರೆಯಲಾಗಿದೆ.

## ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ

**ಹಾಸನ:** ಸಕಲೇಶಪುರ, ಆಲೂರು ಮತ್ತು ಕಟ್ಟಾಯ ವಿಧಾನ ಸಭಾ ಕ್ಷೇತ್ರದ ಶಾಸಕ ಸಿಮೆಂಟ್ ಮಂಜು ಅವರ ಅಧ್ಯಕ್ಷತೆಯಲ್ಲಿ 2025-26 ನೇ ಸಾಲಿನ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನ.4 ರಂದು ಪೂರ್ವಾಹ್ನ 11.30 ಗಂಟೆಗೆ ಸಕಲೇಶಪುರ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

# ನವಗ್ರಹ ವಿಗ್ರಹಗಳ ಪ್ರತಿಷ್ಠಾಪನಾ ಮಹೋತ್ಸವ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಪಟ್ಟಣದ ಶ್ರೀ ನಿರ್ವಿಘ್ನ ಬಲಮುರಿ ಗಣಪತಿ ದೇವಾಲಯ ಹಾಗೂ ನವಗ್ರಹ ವಿಗ್ರಹಗಳ ಪ್ರತಿಷ್ಠಾಪನಾ ಮಹೋತ್ಸವವು ಅ.25 ಮತ್ತು ಅ.26ರಂದು ಜರುಗಲಿದೆ ಎಂದು ಹಿರಿಯ ವಕೀಲ ಡಿ. ಎ. ವಾಸು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಟ್ಟಣದ ಶ್ರೀಲಕ್ಷ್ಮಿ ಬಡಾವಣೆಯಲ್ಲಿ ನೂತನವಾಗಿ ಪ್ರತಿಷ್ಠಾಪಿಸಲಾದ ನಿರ್ವಿಘ್ನ ಬಲಮುರಿ ಗಣಪತಿಯನ್ನು ಲೋಕಾರ್ಪಣೆಗೊಳಿಸಲಾಗುವುದು, ಬಡಾವಣೆಯ ನಿವಾಸಿಗಳಿಗೆ ಸುತ್ತಮುತ್ತ ದೇವಸ್ಥಾನ ಇಲ್ಲದೆ ಪಟ್ಟಣಕ್ಕೆ ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು ಅದನ್ನು ಮನಗಂಡು ಬಡಾವಣೆಯ ಪ್ರಮುಖರು ದೇವಸ್ಥಾನ ನಿರ್ಮಾಣ ಮಾಡಲು ಮುಂದಾಗಿತ್ತು ಪಟ್ಟಣದಲ್ಲೇ ಪ್ರಥಮ ಬಾರಿಗೆ ನಿರ್ವಿಘ್ನ ಗಣಪತಿ ಸ್ಥಾಪಿಸಲಾಗುತ್ತಿದ್ದು 40 ಅಡಿ ಆಂಜನೇಯಸ್ವಾಮಿ ದೇವಸ್ಥಾನದಿಂದ ಗ್ರಾಮ ದೇವತೆ ವಳಗೇರಮ್ಮ ದೇವಿಯ ವೈಭವಪೂರ್ಣ ಉತ್ಸವದೊಂದಿಗೆ ಶ್ರೀಲಕ್ಷ್ಮಿ ಬಡಾವಣೆಗೆ ಆಗಮಿಸಲಿದ್ದು ಮಂಗಳವಾದ್ಯ, ಚಂಡಿವಾದ್ಯ, ಕೋಲಾಟ ಮೆರವಣಿಗೆಗೆ ಮೆರಗು ನೀಡಲಿದೆ ಎಂದು ಹೇಳಿದರು.



ಶಿವಾರ ಉಮೇಶ್ ತಂಡದಿಂದ ಜನಪದ ಝೇಂಕಾರ ಕಾರ್ಯಕ್ರಮ ಏರ್ಪಡಿಸಿದ್ದು ಬರುವ ಭಕ್ತಾಧಿಗಳಿಗೆ ಎರಡು ದಿನಗಳ ಕಾಲ ಅನ್ನ ಸಂತರ್ಪಣೆ ಮತ್ತು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಶಂಭುನಾಥ ಸ್ವಾಮೀಜಿ, ಗುರುಮೂರ್ತಿ ಗುರೂಜಿ, ಸಂಸದ ಶ್ರೇಯಸ್‌ಎಂ.ಪಟೇಲ್, ಡಾ.ಸೂರಜ್ ರೇವಣ್ಣ, ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಶಾಸಕ ಎಂ.ಎ. ಗೋಪಾಲಸ್ವಾಮಿ ಮತ್ತಿತರ ಗಣ್ಯರು ಆಗಮಿಸಲಿದ್ದಾರೆ ಎಂದರು.

ಮೂಡನಹಳ್ಳಿ ನಾಗೇಶ್ ಮತ್ತು ರೋಟರಿ ಕ್ಲಬ್‌ನ ಅಧ್ಯಕ್ಷ ಹಾಗೂ ವಕೀಲ ಗಿರೀಶ್, ಶ್ರೀ ಲಕ್ಷ್ಮಿದೇವಿ ಬಡಾವಣೆಯ ಮರಿಗೌಡ ರಾಯಸಮುದ್ರ, ತೋಟಿರಂಗಪ್ಪ, ವಾಸು ಕಾಂತರಾಜಪುರ, ರಾಜುಪೊಲೀಸ್, ವಿಶ್ವ, ಕೇಶವ, ಗುರುನಂದನ್, ನಾಗಣ್ಣ ಪಾರೆಸ್ಟ್, ಮಹೇಶ್, ಪ್ರಸಾದ್ ಮತ್ತಿತರಿದ್ದರು.

## ಅಮ್ಮನವರಿಗೆ ವಿಶೇಷ ಅಲಂಕಾರ

**ಚನ್ನರಾಯಪಟ್ಟಣ:** ತಾಲ್ಲೂಕಿನ ಹೊಸ ಕೊಪ್ಪಲು ಗ್ರಾಮದ ಶಕ್ತಿ ಮಠದಲ್ಲಿ ದೀಪಾವಳಿ ಅಮಾವಾಸ್ಯೆ ಪ್ರಯುಕ್ತ ಅಮ್ಮನವರಿಗೆ ವಿಶೇಷ ಅಲಂಕಾರ ಉತ್ಸಾವಧಿಗಳು ನೂರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು. ಮಠದ ಪೀಠಾಧ್ಯಕ್ಷರಾದ ಬಸವೇಶ್ವರ ಚೈತನ್ಯ ಮಹಾ ಸ್ವಾಮೀಜಿ ನೇತೃತ್ವ ವಹಿಸಿದ್ದರು.




**ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ**

ಕಲ್ಪಕೃತಿ

(ಕರ್ನಾಟಕ ಸರ್ಕಾರ ಉದ್ಯಮ)

ಎಸ್‌ಎಫ್-4 & ಎಸ್‌ಎಫ್-5, ಸ್ಟರ್ಲಿಂಗ್ ಟವರ್ಸ್, (ಗಾರ್ಮೆಂಟ್ ಕಾಂಪ್ಲೆಕ್ಸ್), ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ವಸಹಾತು, ರಾಜಾಜಿನಗರ, 6ನೇ ಬ್ಲಾಕ್, ಬೆಂಗಳೂರು-560010. ದೂರವಾಣಿ ಸಂ. 080-23105866 / 23105865

**ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಮ್ಯಾಟ್, ಸುರುಳಿ ಹಗ್ಗ, ಕಾಯರ್ ಪಿತ್ ಗೊಬ್ಬರ ಸರಬರಾಜಿಗೆ ಸರಬರಾಜುದಾರರಿಗೆ ಆಹ್ವಾನ** (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವಿವಿಧ ಘಟಕಗಳಿಗೆ ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಮ್ಯಾಟ್, ಸುರುಳಿ ಹಗ್ಗ, ಕಾಯರ್ ಪಿತ್ ಗೊಬ್ಬರ ಸರಬರಾಜಿಗಾಗಿ ಆಸಕ್ತಿಯುಳ್ಳ ತಯಾರಕರು / ಸರಬರಾಜುದಾರರನ್ನು ಟೆಂಡರ್ ಮೂಲಕ ಆಹ್ವಾನಿಸಲಾಗಿದೆ. (1) ಭರ್ತಿ ಮಾಡಿದ ಟೆಂಡರ್ ದಾಖಲಾತಿಯನ್ನು ಸಲ್ಲಿಸುವ ಕೊನೆಯ ದಿನಾಂಕ: **15.11.2025 ಸಂಜೆ 5.00 ಗಂಟೆಯೊಳಗೆ.** (2) ಟೆಂಡರ್ ತೆರೆಯುವ ದಿನಾಂಕ: **17.11.2025ರಂದು ಬೆಳಿಗ್ಗೆ 11.30 ಗಂಟೆಗೆ.** (3) **ಸಂಪರ್ಕಿಸಬೇಕಾದವರು:** ಶ್ರೀ ರವಿಕುಮಾರ್, ಮುಖ್ಯ ವ್ಯವಸ್ಥಾಪಕರು (**ಮೊ.ಸಂ.9141943430**) / ಶ್ರೀ ಹೆಚ್.ಆರ್.ಬಸವರಾಜು, ವ್ಯವಸ್ಥಾಪಕರು-ಉತ್ಪಾದನೆ (**ಮೊ.ಸಂ.9449228749**).

ದಿನಾಂಕ: 23.10.2025 **ಸಹಿ/- ಮುಖ್ಯ ವ್ಯವಸ್ಥಾಪಕರು**



**ಮಾನ್ಯವರ ಭೂ ದಾಖಲೆಗಳ ಉಪನಿರ್ದೇಶಕರ ರವರ ನ್ಯಾಯಾಲಯ, ಹಾಸನ.**

ಅಪೀಲು ಸಂಖ್ಯೆ: 333/2025

ಅಪೀಲುದಾರರು : ಧರಣಿ ಬಿನ್ ಗಿಡ್ಡೇಗೌಡ ಮತ್ತು ಇತರರು

ವಿರುದ್ಧ

ರೆಸ್ಪಾಂಡೆಂಟರು : 1) ರವಿಕುಮಾರ್ ಎಂ.ಎ. ಮತ್ತು ಇತರರು
2) ಗಿಡ್ಡ ಬಿನ್ ಕಗ್ಗಲಿ ಜವರೇಗೌಡ, ವಯಸ್ಕರು ಮಳಲಿ ಗ್ರಾಮ, ಹಳೇಕೋಟೆ ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

**ಪತ್ರಿಕಾ ಪ್ರಕಟಣೆ**

ಮೇಲ್ಕಂಡ ಕೇಸನ್ನು ಅಪೀಲುದಾರರು ರೆಸ್ಪಾಂಡೆಂಟರುಗಳ ಮೇಲೆ ಘನ ಹೊಳೆನರಸೀಪುರ ತಾಲ್ಲೂಕು, ಹಳೇಕೋಟೆ ಹೋಬಳಿ, ಮಳಲಿ ಗ್ರಾಮದ ಸರ್ವೆ ನಂ. 124/1 ಹಾಗೂ 124/8 ರಡಿಯಲ್ಲಿ 121/1 ರಲ್ಲಿ 0-06 ಗುಂಟೆ ಹಾಗೂ ಸರ್ವೆ ನಂ. 124/8 ರಲ್ಲಿನ 0-29 ಗುಂಟೆ ಪೋಡುಗಳು ವ್ಯತ್ಯಾಸವಾಗಿರುವುದಕ್ಕೆ ಸಂಬಂಧಿಸಿದಂತೆ ಸದರಿ ಪೋಡುಗಳನ್ನು ರದ್ದುಪಡಿಸಲು ಕೋರಿ ಘನ ನ್ಯಾಯಾಲಯದಲ್ಲಿ ಅಪೀಲು ದಾಖಲಿಸಿದ್ದು, ಸದರಿ ಅಪೀಲಿನಲ್ಲಿ 2ನೇ ರೆಸ್ಪಾಂಡೆಂಟರಾದ ಗಿಡ್ಡ ಬಿನ್ ಕಗ್ಗಲಿ ಜವರೇಗೌಡ ರವರಿಗೆ ಘನ ನ್ಯಾಯಾಲಯದಿಂದ ನೊಂದಾಯಿತ ಅಂಚೆ ಮೂಲಕ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್‌ನ್ನು ಪಡೆದಿರುವುದಿಲ್ಲ. ಆದ ಕಾರಣ ಮೇಲ್ಕಂಡ ಅಪೀಲಿನ 2ನೇ ರೆಸ್ಪಾಂಡೆಂಟರಾದ ಗಿಡ್ಡ ಬಿನ್ ಕಗ್ಗಲಿ ಜವರೇಗೌಡರಾದ ನಿಮಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೇಲ್ಕಂಡ ಅಪೀಲು ದಿನಾಂಕ: 30-10-2025 ರಂದು ಹಿಯರಿಂಗ್ ಇರುತ್ತೆ. ಆ ದಿನದಂದು ಮೇಲ್ಕಂಡ ಗಿಡ್ಡ ಬಿನ್ ಕಗ್ಗಲಿ ಜವರೇಗೌಡರಾದ ನೀವು ಮಧ್ಯಾಹ್ನ 3-00 ಗಂಟೆಗೆ ಹಾಜರಾಗತಕ್ಕದ್ದು. ಒಂದು ವೇಳೆ ಇದಕ್ಕೆ ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಮೇಲ್ಕಂಡ ಅಪೀಲಿನ ನಡವಳಿಕೆಗಳು ನಡೆಯುತ್ತವೆಂದು ತಿಳಿಯುವುದು.


# ಯಾರಿಗೆ ಹೇಳಬೇಕೋ ಅವರೊಂದಿಗೆ ಮಾತಾಡುತ್ತೇನೆ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಗ್ಗೆ ಚರ್ಚೆಗಳು ನಡೆಯುತ್ತಿದ್ದು, ಈ ಬಗ್ಗೆ ಮಾತನಾಡಬೇಕಾದ ವ್ಯಕ್ತಿಯೊಂದಿಗೆ ಮಾತನಾಡುತ್ತೇನೆಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪ್ರತಿಕ್ರಿಯಿಸಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಅವರು ತಮ್ಮ ತಂದೆಯಂತೆಯೇ ಪ್ರಗತಿಪರ ಸೈದ್ಧಾಂತಿಕ ಚಿಂತನೆ ಹೊಂದಿದ್ದಾರೆಂಬ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, ನಾನು ಈಗ ಮಾತನಾಡುವುದಿಲ್ಲ, ಆದರೆ ಯಾರ ಹತ್ತಿರ ಮಾತನಾಡಬೇಕೋ ಅಲ್ಲಿ ಮಾತನಾಡುತ್ತೇನೆಂದರು.



ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ಇತ್ತೀಚೆಗೆ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದ್ದ ಯತೀಂದ್ರ ಅವರು, ಸಿದ್ದರಾಮಯ್ಯ ಅವರು ತಮ್ಮ ರಾಜಕೀಯ ಜೀವನದ ಕೊನೆಯ ಹಂತದಲ್ಲಿದ್ದಾರೆ. ಇಂತಹ ಸಮಯದಲ್ಲಿ ಪ್ರಗತಿಪರ ಚಿಂತನೆ ಹೊಂದಿರುವವರಿಗೆ, ಸೈದ್ಧಾಂತಿಕವಾಗಿ ಮಾರ್ಗದರ್ಶನ ನೀಡಲು ಮತ್ತು ಮುನ್ನಡೆಸಲು ಒಬ್ಬ ನಾಯಕನ ಅಗತ್ಯವಿದೆ ಎಂದು ಹೇಳಿದ್ದರು.

ಈ ಬಗ್ಗೆ ಖಾರವಾಗಿ ಪ್ರತಿಕ್ರಿಯಿಸಿದ್ದ ರಾಮನಗರ ಶಾಸಕ ಇಕ್ಬಾಲ್ ಹುಸೇನ್, ಮುಖ್ಯಮಂತ್ರಿ ಬದಲಾವಣೆ ಕುರಿತು ನಾವೇನಾದರೂ ಹೇಳಿಕೆ ಕೊಟ್ಟರೆ ನೋಟೀಸ್ ಕೊಡುತ್ತಾರೆ. ಅಂದರೆ ನಾವು ಮಾಡಿದ್ರೆ ಬಲಾತ್ಕಾರ, ಬೇರೆಯವರು ಮಾಡಿದ್ರೆ ಚಮತ್ಕಾರ ಅನ್ನುವ ಪರಿಸ್ಥಿತಿ ಇದೆ ಎಂದಿದ್ದರು.

ಚನ್ನಗಿರಿ ಶಾಸಕ ಶಿವಗಂಗ ಬಸವರಾಜ ಅವರು ಸಹ ಈ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಇತ್ತೀಚೆಗೆ ಶಿವಕುಮಾರ್ ರಾಜ್ಯದ ಮುಂದಿನ ಮುಖ್ಯಮಂತ್ರಿಯಾಗಬೇಕೆಂಬ ಹೇಳಿಕೆಗಾಗಿ ಶಾಸಕರಾದ ಹೆಚ್.ಡಿ. ರಂಗನಾಥ್ ಮತ್ತು ಹೆಚ್.ಎ. ಇಕ್ಬಾಲ್ ಹುಸೇನ್‌ಗೆ ನೋಟೀಸ್ ನೀಡಲಾಗಿತ್ತು.

# ಕೇಶವನಿಗೆ ಮಳೆ ನೀರಿನ ಸಿಂಚನ

• ಪ್ರಜೋದಯ ವರದಿ

**ಹಾರನಹಳ್ಳಿ:** ಹೊಯ್ಸಳರ ಕಾಲದ ಅಪೂರ್ವ ಕಲಾ ಸಿರಿಯ ಹಾರನಹಳ್ಳಿ ಗ್ರಾಮದ ಶ್ರೀ ಚನ್ನಕೇಶವ ಸ್ವಾಮಿ ದೇವಾಲಯ ಬೇಲೂರು ಹಾಗೂ ಹಳೇಬೀಡಿನಷ್ಟೇ ಪ್ರಮುಖವಾದ ದೇಗುಲಗಳಾಗಿದ್ದು, ಕರ್ನಾಟಕ ಸರ್ಕಾರದ ಪ್ರಾಚ್ಯ ವಸ್ತು ಇಲಾಖೆ ಮತ್ತು ಮುಜರಾಯಿ ಇಲಾಖೆ ವ್ಯಾಪ್ತಿಗೆ ಸೇರಿದ್ದು ಮಳೆ ಬಂದ ಸಂದರ್ಭದಲ್ಲಿ ದೇವಾಲಯದ ಗರ್ಭಗುಡಿ ಗೋಪುರದಿಂದ ಮಳೆ ನೀರು ಸೋರುತ್ತಿದ್ದು ದೇವಾಲಯ ಸಂಪೂರ್ಣ ನೀರಿನ ಹೊಂಡವಾಗಿ ಮಾರ್ಪಟ್ಟಿದೆ.

ಪ್ರಧಾನ ಗರ್ಭಗುಡಿಯ ದ್ವಾರದ ಬಂದಿಕೆಯ ಮೇಲೆ ನೀರು ಇಳಿಯುತ್ತಿದೆ. ಇದರಿಂದ ಕುಸುರಿ ಶಿಲ್ಪ ಕೆತ್ತನೆಯ ನೀರು ಇಳಿದು ದೇವಾಲಯದ ಅಂದವನ್ನು ಕೆಡಿಸುತ್ತಿದೆ.



ಚೆನ್ನಕೇಶವ ದೇವಾಲಯ ಹೊಯ್ಸಳರ ದೊರೆ ನರಸಿಂಹನ ಕಾಲದಲ್ಲಿ ದೇವಾಲಯವನ್ನು ನಿರ್ಮಾಣ ಮಾಡಿದ್ದು ಎತ್ತರವಾದ ಜಗತಿ ನಕ್ಷತ್ರಕಾರ ವೇದಿಕೆ, ಭುವನೇಶ್ವರ ನವರಂಗ, ಸುಂದರ ಕಂಬಗಳ ವಿನ್ಯಾಸ. ಹೀಗೆ ಹೊಯ್ಸಳ ಶೈಲಿಯ ಐತಿಹಾಸಿಕ ತ್ರಿಕೂಟಾಚಾಲ ದೇವಸ್ಥಾನವಾಗಿದೆ.

ಕಳೆದ ಸಾಲಿನಲ್ಲಿ ಭಾರತೀಯ ಪಾರಂಪರಾಗತ ಟ್ರಸ್ಟ್ ವತಿಯಿಂದ ವಿಶ್ವ ಪರಂಪರೆ ಪಟ್ಟಿಯಲ್ಲಿ ಈ ದೇವಾಲಯವನ್ನು ಸೇರಿಸಲು ಕೇಂದ್ರ ಸರ್ಕಾರ ಕ್ಕೆ ಶಿಫಾರಸಾಗಿತ್ತು ಇಂತಹ ಭವ್ಯದೇವಾಲಯ ಸಂರಕ್ಷಣೆಗೆ ರಾಜ್ಯ ಪುರಾತತ್ವ ಇಲಾಖೆಯ ಧಾರ್ಮಿಕ ದತ್ತಿ ಇಲಾಖೆ ಸಂರಕ್ಷಣೆ ಕಾರ್ಯ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.




**ಚನ್ನರಾಯಪಟ್ಟಣ: ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ನಿರ್ದೇಶಕ ರಾಗಿ ಅವಿರೋಧ ಆಯ್ಕೆಯಾದ ಸಿ.ಎನ್.ಪುಟ್ಟಸ್ವಾಮಿಗೌಡ ಅವರನ್ನು ಕೆ.ಆರ್.ಪೇಟೆ ತಾಲ್ಲೂಕಿನ ಜೆಡಿಎಸ್ ಮುಖಂಡರು ಸನ್ಮಾನಿಸಿದರು. ಎಪಿಎಂಸಿ ಮಾಜಿ ಅಧ್ಯಕ್ಷ ಐನೋರಹಳ್ಳಿ ಮಲ್ಲೇಶ್, ಐಕನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಐ.ಡಿ.ಉದಯಶಂಕರ್, ಬೋಳ ಮಾರನಹಳ್ಳಿ ಮಂಜಣ್ಣ, ಐನೋರಹಳ್ಳಿ ಬಾಲಚಂದ್ರ, ಸಾಸಲು ಚಂದ್ರಣ್ಣ ಇತರರಿದ್ದರು.**

# ಕಾದಂಬರಿಕಾರ ಎಸ್.ಎಲ್.ಭೈರಪ್ಪಗೆ ನುಡಿನಮನ

• ಪ್ರಜೋದಯ ವರದಿ

**ಹಾಸನ:** ಜೀವನಾನುಭವಗಳು ವ್ಯಕ್ತಿಯ ಶಕ್ತಿ ಎಂದು ನಿವೃತ್ತ ಆಂಗ್ಲ ಭಾಷಾ ಉಪನ್ಯಾಸಕ ಹಾಗೂ ಲೇಖಕ ಗೊರೂರು ಶಿವೇಶ್ ಅವರು ಅಭಿಪ್ರಾಯಪಟ್ಟರು.

ನಗರದ ಟಾರ್ಗೆಟ್ ಪಿಯು ಕಾಲೇಜಿನಲ್ಲಿ ಕದಂಬ ಸೈನ್ಯೆ ಆಯೋಜಿಸಿದ್ದ ಪದಗ್ರಹಣ, ನಿವೃತ್ತ ಪ್ರಾಂಶುಪಾಲರಿಗೆ ಸನ್ಮಾನ ಹಾಗೂ ಡಾ.ಎಸ್.ಎಲ್.ಭೈರಪ್ಪನವರ ನುಡಿನಮನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭೈರಪ್ಪನವರು ಬಾಲ್ಯದಲ್ಲಿ ಸೋದರ, ಸೋದರಿಯರು ತಾಯಿ ಕಳೆದುಕೊಂಡು ಅನಾಥರಾದ ಸಂದರ್ಭದಲ್ಲಿ ಹುಟ್ಟಿದ ಜೀವನದ ಪ್ರಶ್ನೆಗಳಿಗೆ ತತ್ವಶಾಸ್ತ್ರದಲ್ಲಿ ಉತ್ತರ ಕಂಡುಕೊಂಡು ಕೃತಿಗಳಲ್ಲಿ ಅವುಗಳನ್ನು ಪರಿಚಯಿಸಿದರು. ಹುಟ್ಟು ಸಾವು ಮತ್ತು ಅಸ್ತಿತ್ವಗಳ ನಿರಂತರ ಶೋಧನೆಯಲ್ಲಿರುವ ವ್ಯಕ್ತಿಗೆ ತತ್ವಶಾಸ್ತ್ರ ಬೆಳಕು ನೀಡಬಹುದಾದರೂ ಸಾಹಿತ್ಯದಲ್ಲಿ ಭಾವಗಳ ಮೂಲಕ ಪರಿಚಯಿಸಿದಾಗ ಅದು ಮನಸ್ಸಿನ ಆಳಕ್ಕೆ ಇಳಿಯುತ್ತದೆ. ತತ್ವಶಾಸ್ತ್ರ ಅಧ್ಯಾಪಕರಾದ ಎಸ್.ಎಲ್.ಭೈರಪ್ಪನವರು ಜೀವನದ ಆ ಕಟು ಕಹಿ ಸತ್ಯಗಳನ್ನು ರಸಾಭಿವ್ಯಕ್ತಿಯ ಮೂಲಕ ಪರಿಚಯಿಸಿದ ಕಾರಣಕ್ಕೆ ಅವರು ಭಾರತದಲ್ಲಿ ಜನಪ್ರಿಯ ಕನ್ನಡ ಕಾದಂಬರಿಕಾರರಾಗಿ ಹೊರಹೊಮ್ಮಿದರು ಎಂದು ವಿವರಿಸಿದರು.




ಕಾರ್ಯಕ್ರಮದ ಉದ್ಘಾಟನೆಯನ್ನು ಹಲೋ ಹಾಸನ್ ಪತ್ರಿಕೆ ಸಂಪಾದಕರು ರವಿ ನಾಕಲಗೋಡು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಕದಂಬ ಸೈನ್ಯೆ ರಾಜ್ಯಾಧ್ಯಕ್ಷರು ಶ್ರೀ ಬೇಕ್ರಿ ರಮೇಶ್, ರಾಜ್ಯ ಉಪಾಧ್ಯಕ್ಷರು ಡಾ.ದೇವನಹಳ್ಳಿ ದೇವರಾಜ್, ರಾಜ್ಯ ಸಹ ಕಾರ್ಯದರ್ಶಿ ಉಮ್ಮಡಹಳ್ಳಿ ನಾಗೇಶ್, ಮಂಡ್ಯ ಜಿಲ್ಲೆ ಉಪಾಧ್ಯಕ್ಷರು ರಾಮ ಚಿಕ್ಕೇಗೌಡನದೊಡ್ಡಿ, ನಾ. ಮಹದೇವಸ್ವಾಮಿ ಮೈಸೂರು, ಎ.ಹೆಚ್. ಗಣೇಶ್ ಅಂಕಪುರ ನಿವೃತ್ತ ಪ್ರಾಂಶುಪಾಲರು ಮತ್ತು ಅಧ್ಯಕ್ಷರು ಕದಂಬ ಸೈನ್ಯೆ ಹಾಸನ ತಾಲ್ಲೂಕು ಘಟಕ, ಈ. ಕೃಷ್ಣೇಗೌಡರು, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಬೇಲೂರು, ಯಾಕೂಬ್ ಗೊರೂರು ಹಾಸನ ಜಿಲ್ಲಾ ಉಪಾಧ್ಯಕ್ಷರು, ಕದಂಬ ಸೈನ್ಯೆ ತಾಲ್ಲೂಕು ಘಟಕದ ಅಧ್ಯಕ್ಷರು ಹೊಳೆನರಸೀಪುರ ಪುಟ್ಟಸ್ವಾಮಿಗೌಡ, ರವಿಕುಮಾರ್ ವಿಶ್ವಾಸ್ ಡಿ. ಗೌಡ, ಎನ್.ಬಿ.ಆನಂದ ಪಟೇಲ್ ಇನ್ನಿತರರು ಹಾಜರಿದ್ದರು.


**ಮಾನ್ಯವರ ಭೂ ದಾಖಲೆಗಳ ಉಪ ನಿರ್ದೇಶಕರ ನ್ಯಾಯಾಲಯ, ಹಾಸನ**

**ಅಪೀಲು ನಂ: 322/2025**

ಅಪೀಲುದಾರರು : ನಾಗರಾಜು ಮತ್ತು ಇತರರು

ವಿರುದ್ಧ

ದೂರುದಾರರು : ಜವರೇಗೌಡ ಮತ್ತು ಇತರರು

(1ನೇ ಎದುರುದಾರರ ವಾರಸುದಾರರಾದ ಆರ್ 1 ಎ, 8ನೇ ಎದುರುದಾರರ ವಾರಸುದಾರರ ಆರ್ 3 ಎ, ಆರ್8 ಎ, ಆರ್ 8 ಬಿ ಮತ್ತು 9ನೇ ಎದುರುದಾರರ ವಾರಸುದಾರರಾದ ಅಪೀಲಿನ 10ನೇ ಎದುರುದಾರರಿಗೆ ಹಾಗೂ 2, 6, 7 ಮತ್ತು 12ನೇ ಎದುರುದಾರರಿಗೆ)

**ಪತ್ರಿಕಾ ಪ್ರಕಟಣೆ**

ಅಪೀಲುದಾರರು ಕರಿಕ್ಯಾತನಹಳ್ಳಿ ಗ್ರಾಮದ ಸ.ನಂ: 2/6ಬಿ ಮತ್ತು 2/7 ರ ಸ್ವತ್ತುಗಳು 1ನೇ ಅಪೀಲುದಾರರಿಗೆ ಸೇರಿದ್ದಾಗಿದ್ದು ಹಾಗೂ 2ನೇ ಅಪೀಲುದಾರರಿಗೆ ಸೇರಿದ ಕರಿಕ್ಯಾತನಹಳ್ಳಿ ಗ್ರಾಮದ ಸ.ನಂ: 2/8 ಮತ್ತು 2/6 ಎ ರ ಸ್ವತ್ತುಗಳು ದುರಸ್ಥಿ ಮಾಡುವಾಗ ರೀ.ಸ.ನಂ: 2/6 ಎ, ಸ.ನ: 2/9ಎ, ಸ.ನಂ: 2/7 ಮತ್ತು ಸ.ನಂ. 2/8ರ ಹಿಸ್ಸೆಗಳುಳು ಪೂರ್ವ- ಪಶ್ಚಿಮಾಭಿಮುಖವಾಗಿ ಪೋಡುಗಳಾಗಿದ್ದು ಆದರೆ ಅಪೀಲುದಾರರುಗಳು ಹಾಲಿ ಅನುಭವವನ್ನು ಉತ್ತರ- ದಕ್ಷಿಣಾಭಿಮುಖವಾಗಿ ಹೊಂದಿರುತ್ತಾರೆ. ಆದ್ದರಿಂದ ಹದ್ದುಬಸ್ತು ಅಳತೆ ಮಾಡಿ ಹಿಂದೆ ಆಗಿರುವ ಪೋಡುಗಳನ್ನು ರದ್ದುಪಡಿಸಿ ಅಪೀಲುದಾರರ ಹಕ್ಕು ಅನುಭವದಂತೆ ಹೊಸದಾಗಿ ದುರಸ್ಥಿ ಮಾಡಿಕೊಡಲು 19ನೇ ಎದುರುದಾರರಿಗೆ ನಿರ್ದೇಶಿಸುವಂತೆ ಕೋರಿ ತಂದಿರುತ್ತಾರೆ. ಈ ಮೇಲ್ಕಂಡ ಅಪೀಲಿನ 1ನೇ ಎದುರುದಾರರ ವಾರಸುದಾರರಾದ ಡಿ.2ಎ ಅಭಿ ಬಿನ್ ಜವರೇಗೌಡ, ಕರಿಕ್ಯಾತನಹಳ್ಳಿ ಗ್ರಾಮ, ಹಿರೀಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ, 8ನೇ ಎದುರುದಾರರ ವಾರಸುದಾರರು, ಡಿ.8ಎ ಮಧು ಬಿನ್ ಲಕ್ಷ್ಮಣಗೌಡ ಹಾಗೂ ಪ್ರೇಮ ಡಿ.8ಬಿ ವೀಣಾ ಬಿನ್ ಲಕ್ಷ್ಮಣಗೌಡ ಹಾಗೂ ಪ್ರೇಮ, ಇಬ್ಬರ ವಾಸ ಕರಿಕ್ಯಾತನಹಳ್ಳಿ ಗ್ರಾಮ, ಹಿರೀಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ 9ನೇ ಎದುರುದಾರರ ವಾರಸುದಾರರ ಅಪೀಲಿನ 10ನೇ ಎದುರುದಾರರಾಗಿ ಕಡತದ ಮೇಲೆ ಇರುವ ಶೇಷೇಗೌಡ ಬಿನ್ ದೊಡ್ಡೇಗೌಡ, 2ನೇ ಎದುರುದಾರರಾದ ಬೋರೇಗೌಡ ಬಿನ್ ಭೈರೇಗೌಡ, 6ನೇ ಎದುರುದಾರರಾದ ಕೆ.ಎನ್.ರಂಗೇಗೌಡ ಬಿನ್ ನಂಜೇಗೌಡ, 7ನೇ ಎದುರುದಾರರಾದ ಜವರೇಗೌಡ ಬಿನ್ ಕೋಡಿಸಿದ್ದೇಗೌಡ ಮತ್ತು 12ನೇ, ಎದುರುದಾರರಾದ ಲಕ್ಷ್ಮೀಗೌಡ ಬಿನ್ ಲೇಟ್ ರಂಗೇಗೌಡ, 2, 6, 7 ಮತ್ತು 12ನೇ, 13ನೇ ಎದುರುದಾರರ ವಿಳಾಸ ಕರಿಕ್ಯಾತನಹಳ್ಳಿ ಗ್ರಾಮ, ಹಿರೀಸಾವೆ ಹೋಬಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಆದ ನಿಮ್ಮಗಳಿಗೆ ಘನ ನ್ಯಾಯಾಲಯದಿಂದ ನೋಟೀಸ್/ ಸಮನ್ಸನ್ನು ಅಮೀನರ ಮೂಲಕ ಮತ್ತು ನೊಂದಾಯಿತ ಅಂಚೆ ಕಳುಹಿಸಿದರೂ ಸಹ ಜಾರಿಯಾಗುತ್ತಿರುವುದಿಲ್ಲ. ಆ ಕಾರಣದಿಂದ ಈ ಮೂಲಕ ನಿಮಗೆ ತಿಳಿಯಪಡಿಸುವುದೇನೆಂದರೆ ನೀವು ಮೇಲ್ಕಂಡ ಅಪೀಲಿನ ಸಂಬಂಧ ಯಾವುದೇ ತಕರಾರು ಅಥವಾ ಆಕ್ಷೇಪಣೆಯನ್ನು ಸಲ್ಲಿಸುವಂತಿದ್ದರೆ ದಿನಾಂಕ: 30/10/2025 ರಂದು ಮಧ್ಯಾಹ್ನ 3 ಗಂಟೆಗೆ ನೀವಾಗಲೀ, ನಿಮ್ಮ ಪರ ವಕೀಲರಾಗಲೀ, ಘನ ನ್ಯಾಯಾಲಯಕ್ಕೆ ಖುದ್ದು ಹಾಜರಾಗಿ ನಿಮ್ಮ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಪ್ರಕರಣವನ್ನು ನಿಮ್ಮ ವಿರುದ್ಧ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂದು ತಿಳಿಯುವುದು.

ದಿನಾಂಕ: 25/09/2025 ರಂದು ನ್ಯಾಯಾಲಯದ ಆದೇಶದ ಮೇರೆಗೆ ನ್ಯಾಯಾಲಯದ ಮೊಹರು ಮತ್ತು ತನ್ನ ಸಹಿಯೊಂದಿಗೆ ನೀಡಲಾಗಿದೆ.

ಕೆ.ಎನ್.ಕಾಂತರಾಜ್, ಬಿಎಎಲ್,ಎಲ್‌ಎಲ್.ಬಿ., ವಕೀಲರು, ಚನ್ನರಾಯಪಟ್ಟಣ ಅಪೀಲುದಾರರ ಪರ ವಕೀಲರು

ನ್ಯಾಯಾಲಯದ ಅಪ್ಪಣೆ ಮೇರೆಗೆ (ಶಿರಸ್ಥೆದಾರರು) ಡಿ.ಡಿ.ಎಲ್.ಆರ್. ನ್ಯಾಯಾಲಯ, ಹಾಸನ, ಹಾಸನ ಜಿಲ್ಲೆ,


## ಅ.30 ರಂದು ಜಿಲ್ಲಾ ಮಟ್ಟದ ಯುವ ಜನೋತ್ಸವ

ಹಾಸನ: ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಮೈ ಭಾರತ್ ಕೇಂದ್ರ, ರಾಷ್ಟ್ರೀಯ ಸೇವಾ ಸಂಸ್ಥೆ ಹಾಗೂ ಸ್ಥಳೀಯ ಸಂಘ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ಹಾಸನ ನಗರದ ಹಾಸನಾಂಬ ಕಲಾಭವನ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಅ.30 ರಂದು 2025-26 ನೇ ಸಾಲಿನ ಹಾಸನ ಜಿಲ್ಲಾ ಮಟ್ಟದ ಯುವಜನೋತ್ಸ ವ ಕಾರ್ಯಕ್ರಮವನ್ನು ಸಂಘಟನೆ ಮಾಡಲಾಗುತ್ತಿದೆ.

ಸ್ಪರ್ಧಾಳುಗಳು ಮೇಲೆ ತಿಳಿಸಿದ ದಿನಾಂಕದಂದು ಬೆಳಿಗ್ಗೆ 9 ಗಂಟೆಗೆ ಹಾಸನಾಂಬ ಕಲಾಭವನದಲ್ಲಿ ವರದಿ ಮಾಡಿಕೊಂಡು ನೊಂದಾವಣೆ ಮಾಡಿಕೊಳ್ಳುವುದು. ಮಾಹಿತಿಗಾಗಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಸಾಲಗಾಮೆ ರಸ್ತೆ, ಹಾಸನ ಜಿಲ್ಲೆ ಇವರ ಕಚೇರಿ ದೂ. ಸಂ: 08172-296256 ರಲ್ಲಿ ಸಂಪರ್ಕಿಸಬಹುದಾಗಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.


## ಹೆತ್ತೂರು: ನಿವೃತ್ತ ದೈಹಿಕ ಶಿಕ್ಷಣ ಶಿಕ್ಷಕ ಎಚ್.ಪಿ ರಮೇಶ್‌ಗೆ ಅಭಿನಂದನೆ

# ಸರ್ಕಾರಿ ನೌಕರರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ

• ಪ್ರಜೋದಯ ವರದಿ

**ಹೆತ್ತೂರು:** ಸರ್ಕಾರಿ ಶಾಲೆಗಳನ್ನು ಉಳಿಸಿಸಲು ಸರ್ಕಾರಿ ನೌಕರರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ ಇತರರಿಗೆ ಮಾದರಿಯಾಗಬೇಕು ಎಂದು ಹೊಂಗಡಹಳ್ಳ ಸರ್ಕಾರಿ ಶಾಲೆಯ ಮುಖ್ಯ ಶಿಕ್ಷಕ ಮಲ್ಲೇಶ ಅವರು ಮನವಿ ಮಾಡಿದರು.

ಪಟ್ಟಣದ ಡಾ.ಬಿ.ಆರ್ ಅಂಬೇಡ್ಕರ್ ಸಂಭಾಗಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಹೋಬಳಿ ಘಟಕದ ವತಿಯಿಂದ ಗ್ರಾಮದ ಹೆತ್ತೂರು ಗ್ರಾಮ ಪಂಚಾಯಿತಿ ಆಯೋಜಿಸಿದ್ದ ಶಿಸ್ತುಬದ್ಧವಾಗಿ 33 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ದೈಹಿಕ ಶಿಕ್ಷಕ ಎಚ್.ಪಿ ರಮೇಶ್ ಅವರಿಗೆ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಕಲೇಶಪುರ ತಾಲ್ಲೂಕಿನಲ್ಲಿ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸಲು ಅತ್ಯಂತ ಕಷ್ಟ ಪರಿಸ್ಥಿತಿ ಇದೆ. ಮಳೆಗಾಲದಲ್ಲಿ ಅತ್ಯಂತ ಜೋರು ಮಳೆ ಸುರಿಯುವುದು ಒಂದೆಡೆಯಾದರೆ, ಸಾರ್ವಜನಿಕರು ಪ್ರಯಾಣಿಸಲು ಹಾಗೂ ವಿದ್ಯಾರ್ಥಿಗಳು ಶಾಲೆಗಳಿಗೆ ಹೋಗಲು ಸರಿಯಾದ ಬಸ್ಸುಗಳ ವ್ಯವಸ್ಥೆ ಇಲ್ಲದಂತಾಗಿದೆ. ಇಂತಹ ಪರಿಸ್ಥಿತಿ ಇದ್ದರೂ 33 ವರ್ಷಗಳ ಕಾಲ ತಮ್ಮ ವೃತ್ತಿಗೆ ಸ್ವಲ್ಪವೂ ಕಪ್ಪು ಚುಕ್ಕಿ ಬರದಂತೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.



ರಮೇಶ್ ಅವರ ಪ್ರಾಮಾಣಿಕ ಸೇವೆಯಿಂದಾಗಿ ಇವರಿಗೆ ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದ ಪ್ರಶಸ್ತಿಗಳು ದೊರೆತಿವೆ, ವಿದ್ಯಾರ್ಥಿಗಳು ಸಹ ರಾಜ್ಯ ಮಟ್ಟದ ಕ್ರೀಡಾಕೂಡಗಳಲ್ಲಿ ಭಾಗವಹಿಸಲು ಸಾಧ್ಯವಾಗಿದೆ ಎಂದರಲ್ಲದೆ, ಕರ್ನಾಟಕ ಸರ್ಕಾರದ ನೌಕರರು ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ದಾಖಲಿಸಿ ಸರ್ಕಾರಿ ಶಾಲೆ ಉಳಿಸಲು ಸಹಕರಿಸಬೇಕು ಎಂದರು.

ನಿವೃತ್ತ ಮುಖ್ಯ ಶಿಕ್ಷಕ ಸತ್ಯಮೂರ್ತಿ ಅವರು ಮಾತನಾಡಿ, ಮನುಷ್ಯ ಸಮಾಜದಲ್ಲಿ ಒಳ್ಳೆಯ ಮಾದರಿ ವ್ಯಕ್ತಿಯಾಗಬೇಕೆಂದರೆ ಗುರುಗಳ ಮಾರ್ಗದರ್ಶನ ಅತೀ ಮುಖ್ಯವಾದುದು. ಜ್ಞಾನ ಕೊಡುವ ಗುರು ದೇವರಿಗೆ ಸಮಾನ. ಈ ಭಾಗದಲ್ಲಿ ಶಿಕ್ಷಕರು ತಮ್ಮ ಕಷ್ಟದ ವೃತ್ತಿ ಜೀವನದಲ್ಲಿ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ಕೊಟ್ಟು ಸಮಾಜಕ್ಕೆ ಮಾದರಿ ವ್ಯಕ್ತಿಯನ್ನಾಗಿ ರೂಪಿಸಿದ್ದಾರೆ ಎಂದು ಶ್ಲಾಘಿಸಿದರು.

ಈ ಶಾಲೆಯಲ್ಲಿ ಓದಿ ಅದೇ ಶಾಲೆಯಲ್ಲಿ ಸೇವೆ ಸಲ್ಲಿಸಿ ರಮೇಶ ಗುರುಗಳಿಂದ ಕಲಿತ ನಮ್ಮ ಊರಿನಲ್ಲಿ ಉತ್ತಮ ಹೆಸರು ಮಾಡಿ ಉತ್ತಮ ಕೆಲಸದಲ್ಲಿದ್ದಾರೆ. ಇವರ ನಿವೃತ್ತಿ ಜೀವನ ಅತ್ಯಂತ ಸುಖಮಯವಾಗಿರಲಿ ಎಂದು ಹಾರೈಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಹೋಬಳಿ ಘಟಕದ ಅಧ್ಯಕ್ಷ ರವಿಕುಮಾರ್, ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಗಗನ್ ಹಾಡ್ಲಹಳ್ಳಿ, ರೈತ ಯುವ ಮೋರ್ಚಾ, ಕರವೇ ತಾಲ್ಲೂಕು ಅಧ್ಯಕ್ಷ ವಸಂತ, ಕಾರ್ಯದರ್ಶಿ ಜಯಕುಮಾರ್, ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗಭೂಷಣ, ಉಪಾಧ್ಯಕ್ಷೆ ನೇತ್ರ ಸುರೇಶ್, ಶಿಕ್ಷಕ ಸಂಘದ ತಾಲ್ಲೂಕು ಉಪಾಧ್ಯಕ್ಷೆ ದೇವಕಿ, ಸಮಾಜ ಸೇವಕರಾದ ತಮ್ಮಣ್ಣಗೌಡ ಕೊನಬನಹಳ್ಳಿ, ಕೆಪಿಎಸ್ ಶಾಲೆಯ ಪ್ರಾಂಶುಪಾಲ ಮಂಜುನಾಥ, ಉಪ ಪ್ರಾಂಶುಪಾಲ ಭಾಸ್ಕರ, ತಾಲ್ಲೂಕು ಶಿಕ್ಷಕ ಸಂಘದ ಮಾಜಿ ಅಧ್ಯಕ್ಷ ಸತೀಶ್, ಶಿಕ್ಷಕರಾದ ಪ್ರವೀಣ್, ಜ್ಯೋತಿಮಣಿ, ಶೋಭಾ, ನಿವೃತ ಶಿಕ್ಷಕರಾದ ಲವ, ಸುರೇಂದ್ರ, ಕಸಾಪ ಕಾರ್ಯದರ್ಶಿ ಸುರೇಶ್ ಅತ್ತಿಗನಹಳ್ಳಿ, ಪಧಾದಿಕಾರಿಗಳು ಹೇಮಂತ ಮಾಸ್ಟರ್, ಮುರಳಿ, ಸುಬ್ರಹ್ಮಣ್ಯ, ವೈಶಾಲಿ, ಕೀರ್ತಿ ಇನ್ನಿತರರು ಹಾಜರಿದ್ದರು

